# ಜನತಾ ವಾಣಿ


ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಜನವರಿ 06, 2022

ಸಂಪುಟ : 48 ಸಂಚಿಕೆ : 236 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


# ಓಮಿಕ್ರಾನ್ ಸೋಂಕಿನಿಂದ ದೇಶದಲ್ಲಿ ಮೊದಲ ಸಾವು



ನವದೆಹಲಿ, ಜ. 5 – ದೇಶದಲ್ಲಿ ಓಮಿಕ್ರಾನ್ ಸೋಂಕಿತ ವ್ಯಕ್ತಿಯ ಮೊದಲ ಸಾವು ರಾಜಸ್ಥಾನದಲ್ಲಿ ಸಂಭವಿಸಿದೆ. ದೇಶದಲ್ಲಿ ಕೊರೊನಾ ಪ್ರಕರಣಗಳು ಅಗಾಧ ಪ್ರಮಾಣದಲ್ಲಿ ಹೆಚ್ಚಾಗುತ್ತಿರುವ ನಡುವೆ ಸಾವು ಸಂಭವಿಸಿದೆ.

ಕಳೆದ ವರ್ಷ ಸಂಭವಿಸಿದ್ದ ಭೀಕರ ಎರಡನೇ ಅಲೆ ಯನ್ನು ಮೀರಿಸುವ ವೇಗದಲ್ಲಿ ಮೂರನೇ ಅಲೆ ಬರುತ್ತಿದೆ ಎಂದು ಕೇಂದ್ರ ಸರ್ಕಾರದ ಅಂಕಿ - ಅಂಶಗಳು ತಿಳಿಸಿವೆ.

ಪ್ರಸಕ್ತ ಕೊರೊನಾ ಹರಡುವುದನ್ನು ಅಳೆಯಲು ಬಳಸುವ ಆರ್ ಮೌಲ್ಯ 2.69ಕ್ಕೆ ತಲುಪಿದೆ. ಎರಡನೇ ಅಲೆ ಅತಿ ಹೆಚ್ಚಾಗಿದ್ದ ಸಂದರ್ಭದಲ್ಲಿ ಆರ್. ಮೌಲ್ಯ 1.69ರಷ್ಟಿತ್ತು. ಹಿಂದೆಂದಿಗಿಂತಲೂ ಕೊರೊನಾ ಹರಡುವ ವೇಗ ಹೆಚ್ಚಾಗಿದೆ ಎಂದು ನೀತಿ ಆಯೋಗದ ಸದಸ್ಯ (ಆರೋಗ್ಯ) ಡಾ. ವಿ.ಕೆ. ಪೌಲ್ ಹೇಳಿದ್ದಾರೆ.

ರಾಜಸ್ಥಾನದ ಉದಯಪುರದಲ್ಲಿ 73 ವರ್ಷದ ವ್ಯಕ್ತಿಯೊಬ್ಬರು ಕಳೆದ ವಾರ ಸಾವನ್ನಪ್ಪಿದ್ದರು. ಅವರಲ್ಲಿ ಓಮಿಕ್ರಾನ್ ಸೋಂಕಿರುವುದು ದೃಢಪಟ್ಟಿದೆ.

ತಾಂತ್ರಿಕವಾಗಿ ಇದು ಓಮಿಕ್ರಾನ್‌ನಿಂದ ಸಂಭವಿಸಿದ ಮೊದಲ ಸಾವಾಗಿದೆ ಎಂದು ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ ಅಗರ್‌ವಾಲ್ ಹೇಳಿದ್ದಾರೆ.

ಓಮಿಕ್ರಾನ್ ವರದಿ ಬರುವ ಮೊದಲೇ ವ್ಯಕ್ತಿ ಸಾವನ್ನಪ್ಪಿದ್ದರು. ಅವರು ಹಿರಿಯ ವಯಸ್ಸಿನವರಾಗಿದ್ದು, ಸಕ್ಕರೆ ಕಾಯಿಲೆ ಹಾಗೂ ಇತರೆ ಸಮಸ್ಯೆಗಳಿಂದ ಬಳಲುತ್ತಿದ್ದರು. ಸೋಂಕು ಬಂದಾಗ ಸಹ ಅಸ್ವಸ್ಥತೆ ಪರಿಗಣಿಸಿ ಚಿಕಿತ್ಸೆ ನೀಡಲಾಗಿತ್ತು ಎಂದು ಅಗರ್‌ವಾಲ್ ತಿಳಿಸಿದ್ದಾರೆ.

ಸೋಂಕಿತ ವ್ಯಕ್ತಿ ಡಿಸೆಂಬರ್ 31ರಂದು ಉದಯಪುರ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದರು ಎಂದು ರಾಜ್ಯದ ಅಧಿಕಾರಿಗಳು ಹೇಳಿದ್ದಾರೆ. ಹಲವಾರು ರಾಜ್ಯಗಳಲ್ಲಿ ವೈದ್ಯರು ಕೊರೊನಾಗೆ ಸಿಲುಕಿರುವ ವರದಿಗಳು ಬರುತ್ತಿವೆ. ಇದರಿಂದಾಗಿ ವೈದ್ಯರ ಕೊರತೆ ಉಂಟಾಗುವ ಕಳವಳವೂ ವ್ಯಕ್ತವಾಗುತ್ತಿದೆ. ಕಳೆದ ಮೂರು ದಿನಗಳಲ್ಲಿ ಮಹಾರಾಷ್ಟ್ರದ ಸರ್ಕಾರಿ ಆಸ್ಪತ್ರೆಗಳ ಸುಮಾರು 160 ನಿವಾಸಿ ವೈದ್ಯರಲ್ಲಿ ಸೋಂಕಿರುವುದು ಕಂಡು ಬಂದಿದೆ.

ಮಂಗಳವಾರದಂದು ದೇಶದಲ್ಲಿ 58 ಸಾವಿರದಷ್ಟು ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಬುಧವಾರ ದಂದು ಈ ಪ್ರಮಾಣ 70 ಸಾವಿರಕ್ಕೂ ಹೆಚ್ಚಾಗಿರಲಿದೆ. ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಕರ್ನಾಟಕ ಹಾಗೂ ದೆಹಲಿಗಳಲ್ಲಿ ಸೋಂಕು ತೀವ್ರವಾಗಿ ಏರುತ್ತಿದೆ.

ಸೋಂಕು ಹೆಚ್ಚಾದರೂ ಸಹ ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣ ಕಡಿಮೆ ಇದೆ ಎಂದು ಐ.ಸಿ.ಎಂ.ಆರ್. ಪ್ರಧಾನ (2ನೇ ಪುಟಕ್ಕೆ)

# ಮಾಸ್ಕ್ ಕಡ್ಡಾಯ, ಜನ ಸೇರದಂತೆ ನಿರ್ಬಂಧ

## ಎರಡು ವಾರಗಳ ಕೋವಿಡ್ ಮಾರ್ಗಸೂಚಿ ಕಟ್ಟುನಿಟ್ಟಿನ ಜಾರಿಗೆ ಜಿಲ್ಲಾಡಳಿತ ಸಜ್ಜು

ದಾವಣಗೆರೆ, ಜ. 5 - ಕೊರೊನಾ ತಡೆಗಾಗಿ ಮಾಸ್ಕ್ ಕಡ್ಡಾಯಗೊಳಿಸಲು ಹಾಗೂ ಹೆಚ್ಚು ಜನ ಸೇರುವುದನ್ನು ತಡೆಯಲು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುವುದು. ಮಾಸ್ಕ್ ಧರಿಸದವರಿಗೆ ದಂಡ ವಿಧಿಸುವ ಜೊತೆಗೆ, ಹೆಚ್ಚು ಜನರನ್ನು ಸೇರಿಸುವವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಎಂದು ಜಿಲ್ಲಾಡಳಿತ ಎಚ್ಚರಿಕೆ ನೀಡಿದೆ.

ಕೊರೊನಾ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಜ.5ರ ರಾತ್ರಿ 10 ಗಂಟೆಯಿಂದ ಜ.19ರ ಬೆಳಗಿನ ಜಾವ 5 ಗಂಟೆಯವರೆಗೆ ವಿಧಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಮ್ಮ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಮಾಸ್ಕ್ ಹಾಕದಿರುವವರಿಗೆ ದಂಡ ವಿಧಿಸಲು ಹಾಗೂ ಗುಂಪು ಸೇರಿಸುವವರ ವಿರುದ್ಧ ಪ್ರಕರಣ ದಾಖಲಿಸಲು ಪೊಲೀಸರಿಗೆ ಸ್ಪಷ್ಟ ಸೂಚನೆ ನೀಡಲಾಗಿದೆ. ಎಲ್ಲೆಡೆ ಜನರಲ್ಲಿ ಅರಿವು ಮೂಡಿಸಲಾಗುವುದು, ಮಾರ್ಗಸೂಚಿಗಳನ್ನು ಪಾಲಿಸದೇ ಇರುವವರ ವಿರುದ್ಧ ಕ್ರಮ ಖಂಡಿತ ಎಂದು ಎಚ್ಚರಿಸಿದ್ದಾರೆ.

ಜಾತ್ರೆ, ಸಮಾವೇಶಗಳು, ಪ್ರತಿಭಟನೆಗಳಿಗೆ ಮುಂದಿನ ಎರಡು ವಾರ ಅವಕಾಶ ಇರುವುದಿಲ್ಲ ಎಂದಿರುವ ಅವರು, ಬಸ್‌ಗಳಲ್ಲಿ ನಿಯಮ ಮೀರಿ ಹೆಚ್ಚು ಜನರು ಪ್ರಯಾಣಿಸುವುದನ್ನು ತಡೆಯಲು ಕ್ರಮ



**ಶುಕ್ರವಾರ ರಾತ್ರಿ 8ರಿಂದ ಸೋಮವಾರ ಬೆಳಿಗ್ಗೆ 5ರ ವರೆಗೆ ವಾರಾಂತ್ಯದ ಕರ್ಫ್ಯೂ**

**ಮಾರ್ಗಸೂಚಿಗಳನ್ನು ಪಾಲಿಸದೇ ಇದ್ದರೆ ಕ್ರಮ ಖಂಡಿತ: ಡಿಸಿ ಎಚ್ಚರಿಕೆ**

ತೆಗೆದುಕೊಳ್ಳಲಾಗುವುದು ಎಂದಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಬೀಳಗಿ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಕಂಟ್ರೋಲ್ ರೂಂಗಳನ್ನು ತೆರೆಯಲಾಗುವುದು. ಜಿಲ್ಲಾ ಮಟ್ಟದಲ್ಲಿ ವಾರ್ ರೂಂ (3ನೇ ಪುಟಕ್ಕೆ)

## ಕೊರೊನಾ ತಡೆಯಲು ಚುರುಕಾಗಿ

ಹರಿಹರ, ಜ5 - ಕೊರೊನಾ ಮೂರನೇ ಅಲೆ ತಡೆಗಟ್ಟಲು ತಾಲ್ಲೂಕಿನ ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಚುರುಕಿನಿಂದ ತಮ್ಮ ಜವಾಬ್ದಾರಿ ನಿಭಾಯಿಸುವಂತೆ ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ ತಿಳಿಸಿದ್ದಾರೆ.

ನಗರದ ತಾಲ್ಲೂಕು ಕಚೇರಿಯ ಸಭಾಂಗಣದಲ್ಲಿ ಕೊರೊನಾ ರೋಗವನ್ನು ತಡೆಗಟ್ಟಲು ವಿವಿಧ ಇಲಾಖಾವಾರು ಅಧಿಕಾರಿಗಳ ಮಹತ್ವದ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಿದ್ದ ಅವರು, ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಬಹಳ ಮುತುವರ್ಜಿಯಿಂದ ತಮಗೆ ವಹಿಸಿದ ಜವಾಬ್ದಾರಿಯನ್ನು ನಿಭಾಯಿಸಿದ ಪರಿಣಾಮವಾಗಿ ಒಂದು ಮತ್ತು ಎರಡನೇ ಅಂತದ ಕೊರೊನಾ ನಿಯಂತ್ರಣ ತರುವುದಕ್ಕೆ ಸಾಧ್ಯವಾಯಿತು. ಈಗ ಮೂರನೇ ಅಲೆಯು ವ್ಯಾಪಕವಾಗಿ ಹರಡುತ್ತಿದೆ. ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದು ಹೇಳಿದರು.

**ಅಧಿಕಾರಿಗಳು, ಸಿಬ್ಬಂದಿಗಳಿಗೆ ಹರಿಹರ ತಹಶೀಲ್ದಾರ್ ರಾಮಚಂದ್ರಪ್ಪ ಸೂಚನೆ**

ಸಾರ್ವಜನಿಕರು ಸಹ ಜಾಗೃತರಾಗಬೇಕು. ಕಡ್ಡಾಯವಾಗಿ ಮಾಸ್ಕ್ ಧರಿಸಿಕೊಂಡು ಓಡಾಡಬೇಕು. ಸಭೆ ಸಮಾರಂಭಗಳಲ್ಲಿ ಅಂತರವನ್ನು ಕಾಯ್ದುಕೊಳ್ಳಬೇಕು. ಅವಶ್ಯಕತೆ ಇದ್ದಾಗ ಮಾತ್ರ ಹೊರಗಡೆ ಓಡಾಡಬೇಕು ಎಂದು ತಹಶೀಲ್ದಾರ್ ಹೇಳಿದರು.

ನಗರಸಭೆ ಪೌರಾಯುಕ್ತರಾದ ಎಸ್. ಲಕ್ಷ್ಮಿ ಮಾತನಾಡಿ, (3ನೇ ಪುಟಕ್ಕೆ)

# ಹಾಲಸ್ವಾಮಿ ಮಠದ ಪೀಠಾಧಿಪತಿ ಆಯ್ಕೆ ಮುಂದಕ್ಕೆ

ಮೃತ್ಯುಂಜಯ ಪಾಟೀಲ್

ಹೊನ್ನಾಳಿ, ಜ.5- ತಾಲ್ಲೂಕಿನ ರಾಂಪುರ ಹಾಲಸ್ವಾಮಿ ಮಠಕ್ಕೆ ಪೀಠಾಧಿಪತಿಗಳನ್ನು ನೇಮಕ ಮಾಡುವ ವಿಷಯವಾಗಿ ಕಾಶಿ ಜಗದ್ಗುರುಗಳ ಸಮ್ಮುಖದಲ್ಲಿ ಇಂದು ನಡೆದ ಸಭೆಯು ಯಾವುದೇ ಅಂತಿಮ ತೀರ್ಮಾನ ಕೈಗೊಳ್ಳಲಾಗದೆ ನಾಳೆಗೆ ಮುಂದೂಡಲಾಯಿತು.

ಶ್ರೀ ಸದ್ಗುರು ಶಿವಯೋಗಿ ಹಾಲ ಸ್ವಾಮೀಜಿ ಸಂಸ್ಥಾನ ಪೀಠಕ್ಕೆ, ಪಂಚ ಪೀಠಗಳಲ್ಲೊಂದಾದ ಕಾಶಿ ಪೀಠದ ಜಗದ್ಗುರು ಡಾ.ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮೀಜಿ ನಿನ್ನೆ ತಡ ರಾತ್ರಿ ಆಗಮಿಸಿದ್ದು, ಮಠಕ್ಕೆ ಕಾಶಿ ಶ್ರೀಗಳ ದಿಢೀರ್ ಆಗಮನದ ಸುದ್ದಿ ರಾಂಪುರ ಬೃಹನ್ಮಠದ ಭಕ್ತ ಸಮೂಹದಲ್ಲಿ ಭಾರೀ ಕುತೂಹಲ ಮೂಡಿಸಿತು.

ರಾಂಪುರ ಬೃಹನ್ಮಠದ ಶ್ರೀ ವಿಶ್ವೇಶ್ವರ ಶಿವಾಚಾರ್ಯ ಹಾಲಸ್ವಾಮೀಜಿ ಕೋವಿಡ್‌ನಿಂದ ಅಕಾಲಿಕವಾಗಿ ಲಿಂಗೈಕ್ಯರಾದ ಹಿನ್ನೆಲೆಯಲ್ಲಿ ಮಠದ ಪೀಠಾಧ್ಯಕ್ಷ ಸ್ಥಾನ ಕಳೆದ ಒಂದೂವರೆ ವರ್ಷಗಳಿಂದ ಶೂನ್ಯವಾಗಿತ್ತು.

ಈ ಮಠವು ಕಾಶಿ ಪೀಠದ ಶಾಖಾ ಮಠವಾದ ಕಾರಣಕ್ಕೆ, ಇದರ ಉತ್ತರಾಧಿಕಾರಿ ನೇಮಕ ಕಾಶಿ ಶ್ರೀಗಳ ಜವಾಬ್ದಾರಿಯಾಗಿದ್ದರಿಂದ ಅವರು ಬುಧವಾರ ಸಾವಿರಾರು ಭಕ್ತ ಸಮೂಹದ ಮುಂದೆ ಉತ್ತರಾಧಿಕಾರಿ ನೇಮಕ ಸಭೆಯ ಸಾನ್ನಿಧ್ಯ ವಹಿಸಿಕೊಂಡು ಮಠದ ಕರ್ತೃಗದ್ದಿಗೆಯ ಉತ್ಸವ ಮೂರ್ತಿಯ ಮೂಲಕ ಉತ್ತರಾಧಿಕಾರಿ ನೇಮಕಕ್ಕೆ ಮುಂದಾಗಿದ್ದು, ನೆರೆದಿದ್ದ ಭಕ್ತ ಸಮೂಹವನ್ನೇ ಅಚ್ಚರಿಗೊಳಿಸಿತು.



> “ ಮಠದ ಕುಟುಂಬಸ್ಥರನ್ನೇ ಮರಿಸ್ವಾಮಿ ಮಾಡಲು ಮಠದ ಪಲ್ಲಕ್ಕಿ ಹೊರಡಿಸಿ, ಇಬ್ಬರು ಮಕ್ಕಳಿಂದ ಚೀಟಿ ಎತ್ತುವ ಮೂಲಕ ಒಪ್ಪಿಗೆಯಾದರೂ, ಮರಿ ಸ್ವಾಮಿಗಳು ಸಮರ್ಪಕ ಆಡಳಿತ ನಡೆಸಲು 10 ರಿಂದ 15 ವರ್ಷಗಳು ಬೇಕಿದೆ. ಅಲ್ಲಿಯವರೆಗೂ ಮಠದ ಆಡಳಿತ ನೋಡಿಕೊಳ್ಳುವವರು ಯಾರು ಎಂಬ ವಿಷಯ ಮಾತ್ರ ಪರ-ವಿರೋಧಗಳಿಂದಾಗಿ ಅಂತಿಮ ಗೊಳಿಸಲು ಸಾಧ್ಯವಾಗದೇ ಸಭೆ ಮುಂದೂಡಲಾಗಿದೆ.

ಮಠಕ್ಕೆ ಉತ್ತರಾಧಿಕಾರಿ ನೇಮಕದ ವಿಚಾರದಲ್ಲಿ ಲಿಂಗೈಕ್ಯ ಶ್ರೀಗಳ ಸಹೋದರ ಸಂಬಂಧಿಗಳಲ್ಲಿ ಎರಡು ಪಂಗಡಗಳು ಹುಟ್ಟಿಕೊಂಡು, ಕಳೆದ ಆರು ತಿಂಗಳಿಂದ ಕಾಶಿ ಶ್ರೀಗಳ ಬಳಿ ತೆರಳಿ ಪರ, ವಿರೋಧದ ದೂರುಗಳನ್ನು ಹೇಳಿಕೊಂಡು ಬಂದಿದ್ದವು. ಇದಕ್ಕೆ ಏನನ್ನೂ ಪ್ರತಿಕ್ರಿಯಿಸದ ಕಾಶಿ ಶ್ರೀಗಳು ಸ್ವತಃ ಏನನ್ನೂ ತೀರ್ಮಾನಿಸದೆ ಮಠದ ಕರ್ತೃ ಗದ್ದಿಗೆಯ ಉತ್ಸವ ಮೂರ್ತಿ ಪಲ್ಲಕ್ಕಿಯ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿರೋಣ ಎಂದು ಈ ಹಿಂದೆ ಎರಡೂ ಪಂಗಡಗಳಿಗೆ ಹೇಳಿ ಕಳಿಸಿದ್ದರಂತೆ.

ಅದರಂತೆ ಬುಧವಾರ ಶ್ರೀಗಳು ಎರಡೂ ಪಂಗಡದ ಮಧ್ಯೆ ಚರ್ಚೆಗೆ ಮುಂದಾಗಿದ್ದು, ಶ್ರೀಗಳು ಬುಧವಾರ ಮಠದ ಕರ್ತೃ ಗದ್ದುಗೆಯಲ್ಲಿ ತಮ್ಮ ನಿತ್ಯ ಪೂಜಾ (3ನೇ ಪುಟಕ್ಕೆ)

# ಪ್ರಧಾನಿ ಭದ್ರತೆಯಲ್ಲಿ ಪ್ರಮುಖ ಲೋಪ

## ಫ್ಲೈಓವರ್‌ನಲ್ಲಿ 20 ನಿಮಿಷ ಸಿಲುಕಿದ ಪ್ರಧಾನಿ ಮೋದಿ

ನವದೆಹಲಿ, ಜ. 5 – ಪ್ರಮುಖ ರಕ್ಷಣಾ ಲೋಪದಿಂದಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪಂಜಾಬ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಸುಮಾರು 20 ನಿಮಿಷಗಳ ಕಾಲ ಫ್ಲೈಓವರ್‌ನಲ್ಲಿ ಸಿಲುಕಿದ ಘಟನೆ ನಡೆದಿದೆ.



ಪ್ರಧಾನಿ ಮೋದಿ ಅವರು ಹುಸ್ಸೈನಿವಾಲಾದಲ್ಲಿರುವ ರಾಷ್ಟ್ರೀಯ ಹುತಾತ್ಮರ ಸ್ಮಾರಕಕ್ಕೆ ತೆರಳುವ ಸಂದರ್ಭದಲ್ಲಿ ಕೆಲ ಪ್ರತಿಭಟನಾಕಾರರು ರಸ್ತೆ ತಡೆದಿದ್ದರು. ಆಗ 20 ನಿಮಿಷಗಳ ಕಾಲ ಫ್ಲೈಓವರ್ ಮೇಲೆ ಪ್ರಧಾನಿ ಇರಬೇಕಾಯಿತು ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.


ಪ್ರಧಾನ ಮಂತ್ರಿ ಬೆಂಗಾವಲು ವಾಹನಗಳು ಹಾದು ಹೋಗುವ ದಾರಿಯ ಬಗ್ಗೆ ಪಂಜಾಬ್ ಪೊಲೀಸರಿಗೆ ಸ್ಪಷ್ಟವಾಗಿ ತಿಳಿಸಲಾಗಿತ್ತು. ಆದರೂ ರಸ್ತೆ ತಡೆ ನಡೆಸಲಾಗಿದೆ ಎಂದು ಗೃಹ ಸಚಿವಾಲಯ ಹೇಳಿದೆ.

ಬಟಿಂಡಾ ವಿಮಾನ ನಿಲ್ದಾಣದಲ್ಲಿ ಇಳಿದ ನಂತರ ಪ್ರಧಾನ ಮಂತ್ರಿ ಹೆಲಿಕಾಪ್ಟರ್ ಮೂಲಕ ಹುಸ್ಸೈನಿವಾಲಾಗೆ ತೆರಳಬೇಕಿತ್ತು. ಹವಾಮಾನ ಪರಿಸ್ಥಿತಿಯಿಂದಾಗಿ ಹೆಲಿಕಾಪ್ಟರ್ ಬದಲು ರಸ್ತೆ ಮಾರ್ಗದಲ್ಲಿ ತೆರಳಬೇಕಾಯಿತು. ಭದ್ರತಾ ವ್ಯವಸ್ಥೆ ಮಾಡಿರುವ ಬಗ್ಗೆ ಪಂಜಾಬ್ ಡಿ.ಜಿ.ಪಿ. ತಿಳಿಸಿದ ನಂತರವೇ ಪ್ರಧಾನಿ ತೆರಳಿದ್ದರು.

ತುರ್ತು ಯೋಜನೆಯ ಅನ್ವಯ ರಸ್ತೆಯಲ್ಲಿ ಯಾವುದೇ ಸಂಚಾರ ಇದ್ದರೆ ತಡೆಯಲು ಪಂಜಾಬ್ ಸರ್ಕಾರ ಹೆಚ್ಚುವರಿ ಭದ್ರತಾ ಪಡೆಗಳನ್ನು ನಿಯೋಜಿಸಿರಲಿಲ್ಲ. ಇದಾದ ನಂತರ ಪ್ರಧಾನಿ ಬೆಂಗಾವಲು ವಾಹನಗಳು ಬಟಿಂಡಾ ವಿಮಾನ ನಿಲ್ದಾಣಕ್ಕೆ ಮರಳಿವೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

ಈ ರೀತಿಯ ಭದ್ರತಾ ನಿರ್ಲಕ್ಷ್ಯ ಒಪ್ಪಲಾಗದು. ಈ ಬಗ್ಗೆ ಜವಾಬ್ದಾರಿ ನಿಗದಿ ಪಡಿಸಬೇಕು ಹಾಗೂ ವಿವರವಾದ ವರದಿ ಸಲ್ಲಿಸಬೇಕು (2ನೇ ಪುಟಕ್ಕೆ)

# ಕಷ್ಟಪಟ್ಟರೆ ಫಲ ಕಟ್ಟಿಟ್ಟ ಬುತ್ತಿ



ಕೊಲನಪಾಕ (ತೆಲಂಗಾಣ) ಜ.5- ಸತ್ಯ ಶುದ್ಧವಾದ ಜೀವನ ಶ್ರೇಯಸ್ಸಿಗೆ ದಾರಿ. ಗುರಿಯಿಲ್ಲದ, ಸಾಧನೆಯಿಲ್ಲದ ಜೀವನ ವ್ಯರ್ಥ. ಕಷ್ಟ ಪಟ್ಟು ಶ್ರಮವಹಿಸಿ ದುಡಿದರೆ ಫಲ ಕಟ್ಟಿಟ್ಟ ಬುತ್ತಿ ಎಂದು ರಂಭಾಪುರಿ ಪೀಠದ ಜಗದ್ಗುರು ಶ್ರೀ ಡಾ. ವೀರ ಸೋಮೇಶ್ವರ ಜಗದ್ಗುರುಗಳು ಪ್ರತಿಪಾದಿಸಿದರು.

ತೆಲಂಗಾಣ ರಾಜ್ಯದ ಕೊಲನಪಾಕ ಶ್ರೀ ಸ್ವಯಂಭು ಸೋಮೇಶ್ವರ ಕ್ಷೇತ್ರದಲ್ಲಿ ತಮ್ಮ 66ನೇ ಜನ್ಮದಿನೋತ್ಸವದ ನಿಮಿತ್ಯ ಸಂಯೋಜಿಸಿದ 3ನೇ ದಿನದ ಧರ್ಮ ಜಾಗೃತಿ ಸಮಾರಂಭದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಧರ್ಮ, ಸಂಸ್ಕೃತಿ ಬಗ್ಗೆ ಮಾತನಾಡುವುದು ಬಲು ಸುಲಭ. ಆದರೆ ಆಚರಣೆಯಲ್ಲಿ ತರುವುದು ಬಲು ಕಷ್ಟ. ಪ್ರಾಣ, (2ನೇ ಪುಟಕ್ಕೆ)

# ನಿಗದಿಯಂತೆ ಮೇಕೆದಾಟು ಯೋಜನೆ ಪಾದಯಾತ್ರೆ

**ಕೊರೊನಾ ಮಾರ್ಗಸೂಚಿ ಪಾಲಿಸಿ ಪಾದಯಾತ್ರೆ ನಡೆಸಲು ಕಾಂಗ್ರೆಸ್ ನಿರ್ಧಾರ**

ಬೆಂಗಳೂರು, ಜ. 5 – ಮೇಕೆದಾಟು ಯೋಜನೆ ಜಾರಿಗೆ ಒತ್ತಾಯಿಸಿ ಬೆಂಗಳೂರಿನಿಂದ ಮೇಕೆದಾಟಿಗೆ ಪಾದಯಾತ್ರೆ ಅಭಿಯಾನದಲ್ಲಿ ಮುಂದುವರೆಯಲು ಕಾಂಗ್ರೆಸ್ ನಿರ್ಧರಿಸಿದೆ.

ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿರುವ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆ.ಪಿ.ಸಿ.ಸಿ. ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕೊರೊನಾ ಮಾರ್ಗಸೂಚಿಗಳನ್ನು ಪಾಲಿಸಿ ಪಾದಯಾತ್ರೆ ನಡೆಸುವುದಾಗಿ ಹೇಳಿದ್ದಾರೆ.

ಮೇಕೆದಾಟು ಯೋಜನೆಗೆ ಒತ್ತಾಯಿಸಿ ಜನವರಿ 9ರಿಂದ 19ರವರೆಗೆ ಸುಮಾರು 100 ಕಿ.ಮೀ. ಪಾದಯಾತ್ರೆ ಮಾಡಲು ಕಾಂಗ್ರೆಸ್ ಉದ್ದೇಶಿಸಿದೆ.

ಪಕ್ಷದ ಹಿರಿಯ ನಾಯಕರ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಪಾದಯಾತ್ರೆಯಲ್ಲಿ ಮುಂದುವರೆಯಬೇಕು ಎಂಬ ಒಮ್ಮತದ ನಿರ್ಧಾರವಾಗಿದೆ ಎಂದು ಶಿವಕುಮಾರ್ ತಿಳಿಸಿದ್ದಾರೆ.

ಅಡ್ಡಿಪಡಿಸಲು ಬಿಜೆಪಿ ಸರ್ಕಾರ ಯತ್ನಿಸುತ್ತಿದೆ. ಇದಕ್ಕಾಗಿಯೇ ರಾಜ್ಯದಲ್ಲಿ ಕೊರೊನಾ ನಿರ್ಬಂಧಗಳನ್ನು ಹೇರಲಾಗಿದೆ. ನಾವು ಸ್ಯಾನಿಟೈಜರ್, ಮಾಸ್ಕ್, ಸಾಮಾಜಿಕ ಅಂತರ ಹಾಗೂ ಗ್ಲೌಸ್ ಇತ್ಯಾದಿಗಳನ್ನು ಬಳಸಿ ಸುರಕ್ಷಿತವಾಗಿ ಪಾದಯಾತ್ರೆ ಮಾಡುತ್ತೇವೆ ಎಂದು ಶಿವಕುಮಾರ್ ಹೇಳಿದ್ದಾರೆ.

ಕೊರೊನಾ ಹೆಚ್ಚಾಗುತ್ತಿರುವ ಕಾರಣಕ್ಕೆ ಪಾದಯಾತ್ರೆ ನಿಲ್ಲಿಸಬೇಕು ಎಂದು ಹೇಳುತ್ತಿರುವುದು ಬಿಜೆಪಿ ಸರ್ಕಾರದ ದ್ವಿಮುಖ ಧೋರಣೆಯಾಗಿದೆ. ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಮಾರ್ಗಸೂಚಿಗಳು ಅನ್ವಯಿಸುತ್ತವೆಯೇ (3ನೇ ಪುಟಕ್ಕೆ)

# ಕೊವ್ಯಾಕ್ಸಿನ್ ಲಸಿಕೆ ಪಡೆದವರಿಗೆ ಪ್ಯಾರಸಿಟಮಾಲ್ ಅಗತ್ಯವಿಲ್ಲ

ಹೈದರಾಬಾದ್, ಜ. 5 – ಕೊವ್ಯಾಕ್ಸಿನ್ ಲಸಿಕೆ ಪಡೆದವರಿಗೆ ಪ್ಯಾರಸಿಟಮಾಲ್ ಇಲ್ಲವೇ ನೋವು ನಿವಾರಕ ಗುಳಿಗೆ ನೀಡುವ ಅಗತ್ಯವಿಲ್ಲ ಎಂದು ಲಸಿಕೆ ಉತ್ಪಾದಿಸುವ ಭಾರತ್ ಬಯೋಟೆಕ್ ತಿಳಿಸಿದೆ. ಕೆಲ ಲಸಿಕಾ ಕೇಂದ್ರಗಳಲ್ಲಿ ಕೊವ್ಯಾಕ್ಸಿನ್ ಪಡೆದ ಮಕ್ಕಳಿಗೆ ಪ್ಯಾರಸಿಟಮಾಲ್ 500 ಎಂ.ಜಿ.ಯ ಮೂರು ಮಾತ್ರೆಗಳನ್ನು ನೀಡಲಾಗುತ್ತಿದೆ ಎಂಬ ಮಾಹಿತಿ ದೊರೆತಿದೆ. ಆದರೆ, ಲಸಿಕೆ ಪಡೆದವರಿಗೆ ಯಾವುದೇ ಪ್ಯಾರಸಿಟಮಾಲ್ ಇಲ್ಲವೇ ನೋವು ನಿವಾರಕ ನೀಡುವ ಅವಶ್ಯಕತೆ ಇಲ್ಲ ಎಂದು ಭಾರತ್ ಬಯೋಟೆಕ್ ಹೇಳಿಕೆಯಲ್ಲಿ ತಿಳಿಸಲಾಗಿದೆ. (3ನೇ ಪುಟಕ್ಕೆ)

# ‘ಕೊರೊನಾ’ ಅಂತ್ಯಸಂಸ್ಕಾರ - ಶಿವಗಣಾರಾಧನೆ..!

## ಹರಪನಹಳ್ಳಿ ತಾಲ್ಲೂಕು ಮತ್ತಿಹಳ್ಳಿ ಗ್ರಾಮದಲ್ಲಿ ಅಹೋರಾತ್ರಿ ಭಜನೆ; ವಿಶೇಷ ಪೂಜೆ



ಹರಪನಹಳ್ಳಿ,ಜ.5- ತಾಲ್ಲೂಕಿನ ವ್ಯಾಪ್ತಿಯ ಮತ್ತಿಹಳ್ಳಿ ಗ್ರಾಮದ ಸುತ್ತಮುತ್ತಲಿನ ನಾಗರಿಕರು ಜ.1ರಂದು ಗ್ರಾಮದ ಶ್ರೀ ಕಾಳಿಕಾಂಬ ದೇವಸ್ಥಾನದ ಮುಂಭಾಗದಲ್ಲಿ ಕೊರೊನಾ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಕಾಳಿಕಾಂಬ ಭಜನಾ ಸಂಘ, ಮಾರಿಕಾಂಬ ಭಜನಾ ಸಂಘದವರು ಅಹೋರಾತ್ರಿ ಭಜನೆ ನಡೆಸಿದರು.

ಜ.2ರಂದು ಕಂಚಿಕೆರೆ ಶ್ರೀ ಕ್ಷೇತ್ರ ಬಿದ್ದ ಹನುಮಪ್ಪನ ಮಟ್ಟಿಯ ವೀರಾಂಜನೇಯ ಮಹಾಸ್ವಾಮಿ ಟ್ರಸ್ಟ್ ಧರ್ಮದರ್ಶಿ ಶ್ರೀ ಬಸವರಾಜ ಗುರೂಜಿ ಅವರು ವಿಶೇಷ ಪೂಜೆ ಸಲ್ಲಿಸಿ ಅಂತ್ಯಸಂಸ್ಕಾರ ನೆರವೇರಿಸಿದರು. ಕೊರೊನಾ ಮೂರ್ತಿಯ ಶವವನ್ನು ಕೂರಿಸಿ, ‘ಕೊರೊನಾ ಮಹಾಮಾರಿ ತೊಲಗಲಿ’ ಎಂಬ ನಾಮ ಫಲಕಗಳೊಂದಿಗೆ ಸಮಾಜದ ಸರ್ವ ಬಂಧುಗಳು ಜೊತೆಗೂಡಿ ಮೆರವಣಿಗೆಯೊಂದಿಗೆ ವಾದ್ಯಮೇಳ ಸಮೇತ ರುದ್ರಭೂಮಿಗೆ ಹೋಗಿ ಶವವನ್ನು ಅಗ್ನಿ ಸ್ಪರ್ಷ ಮಾಡಿ ಅಂತ್ಯಸಂಸ್ಕಾರ ಮಾಡಲಾಯಿತು.!

ದಿನಾಂಕ 3ರಂದು ಪವಿತ್ರ ಗಂಗಾಜಲವನ್ನು ಸಿಂಪಡಿಸಿ ಗ್ರಾಮದ ನವದೇವತೆಗಳನ್ನು ಪವಿತ್ರಗೊಳಿಸಲಾಯಿತು. ಕೊರೊನಾ ಮಹಾಮಾರಿಯ ‘ಶಿವಗಣಾರಾಧನೆ’ಯನ್ನೂ ಸಹ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಗ್ರಾಮದ ಪ್ರಮುಖರಾದ ಸಣ್ಣ ನಿಂಗನಗೌಡ ವಕೀಲರು, ಕೆ. ಕೆಂಚನಗೌಡ, ಸಣ್ಣ ನಿಂಗಪ್ಪ, ಸಣ್ಣ ಕೆಂಚಪ್ಪ, ಗ್ರಾಮ ಪಂಚಾಯಿತಿ ಸದಸ್ಯ ಕೆ. ಶ್ರವಣಕುಮಾರ, ಸಿ. ಕೋಟೆಪ್ಪ, ಕೆ. ಮಂಜುನಾಥ, ರಾಜು ಅಣ್ಣಿ, ಎಂ.ಪಿ. ಕೊಟ್ರೇಶಗೌಡ, ಆರ್. (3ನೇ ಪುಟಕ್ಕೆ)







॥ ಶ್ರೀ ಬಸವೇಶ್ವರ ಪ್ರಸನ್ನ ॥

**ಕೈಲಾಸ ಸಮಾರಾಧನೆಯ ಆಹ್ವಾನ ಪತ್ರಿಕೆ**



ಶ್ರೀಪುಟ್ಟನಗೌಡ ಉಡೇದ,
ಚಿಕ್ಕಮ್ಮಣ್ಣಿ ದೇವರಾಜ ಅರಸು ಬಡಾವಣೆ, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 25.12.2021ನೇ ಶನಿವಾರ ಬೆಳಿಗ್ಗೆ 10.30ಕ್ಕೆ ನನ್ನ ಧರ್ಮಪತ್ನಿಯವರಾದ
ಶ್ರೀಮತಿ ಹೆಚ್.ಪಿ. ಸಾವಿತ್ರಮ್ಮ
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಸಮಾರಾಧನೆಯನ್ನು**

ದಿನಾಂಕ 6.01.2022ನೇ ಗುರುವಾರ, ಬೆಳಿಗ್ಗೆ 11 ಕ್ಕೆ ದಾವಣಗೆರೆ ಜಿಲ್ಲಾ ನಿವೃತ್ತ ನೌಕರರ ಭವನ, ಎಂ.ಸಿ.ಸಿ. ‘ಬಿ’ ಬ್ಲಾಕ್, ಬಾಪೂಜಿ ಸ್ಕೂಲ್ ಹತ್ತಿರ, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.

ಇಂತಿ ದುಃಖತಪ್ತರು :
ಶ್ರೀ ಪುಟ್ಟನಗೌಡ ಉಡೇದ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.
ಮೊ: 99008 37148, 89703 57140

**ಮಹಿಳಾ ಪಿ.ಜಿ.**
ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ. ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
90601 72745

**ಬೇಕಾಗಿದ್ದಾರೆ**
ಬೆಣ್ಣೆ ದೋಸೆ ಭಟ್ಟರು, ಹೆಲ್ಪರ್ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
90601 72745

**ಸೈಟ್‌ಗಳು ಮಾರಾಟಕ್ಕಿವೆ**
40x60, 40x60 East ಅಕ್ಕ-ಪಕ್ಕ ಬನಶಂಕರಿ ಲೇಔಟ್‌ನಲ್ಲಿ, 40x60 South ಕೆ.ಹೆಚ್.ಬಿಯಲ್ಲಿ, 40x56 North, 40x63 West ಡಾಲರ್ಸ್ ಕಾಲೋನಿಯಲ್ಲಿ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್‌ಗಳು ಬೇಕಾಗಿವೆ**
ವಿದ್ಯಾನಗರ, ತರಬಾಳು ಬಡಾವಣೆಯಲ್ಲಿ, ವಿನಾಯಕ ಬಡಾವಣೆಯಲ್ಲಿ 40x60, 50x80, 30x50 ಅಳತೆಯ ಸೈಟ್‌ಗಳು ಬೇಕಾಗಿವೆ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಲೇಔಟ್‌ನಲ್ಲಿ, ಡಾಲರ್ಸ್ ಕಾಲೋನಿಯಲ್ಲಿ 40x61 East, 40x63 West, 70x63 Corner, 30x50 North, 30x50 West, 30x40 West
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬ್ಯಾಗ್ ಕಳೆದಿದೆ**
ಹರಿಹರದಿಂದ ದಾವಣಗೆರೆಗೆ ಬರುವ ಹೈವೇ ರಸ್ತೆಯಲ್ಲಿ ದಿನಾಂಕ 5.1.2022ರ ಬುಧವಾರ ಮಧ್ಯಾಹ್ನ 3 ರಿಂದ 4 ಗಂಟೆ ಹೊತ್ತಿನಲ್ಲಿ ಬೈಕ್‌ನಿಂದ ಬ್ಯಾಗ್ ಬಿದ್ದಿರುತ್ತದೆ. ಬ್ಯಾಗಿನ ಮೇಲೆ ರಾಧಾಕೃಷ್ಣ ಗುಪ್ತ ಅಂತ ಹೆಸರಿದೆ, 2 ರೇಷ್ಮೆ ಸೀರೆ ಮತ್ತು ಸಾದಾ ಸೀರೆ ಅದರಲ್ಲಿವೆ. ಯಾರಿಗಾದರೂ ಸಿಕ್ಕಿಲ್ಲಿ, ತಂದು ಕೊಟ್ಟಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು.
98452 69466, 81399 38728

**ಕೆಲಸಕ್ಕೆ ಬೇಕಾಗಿದ್ದಾರೆ**
NISARGA ENTERPRISES INTERIOR & EXTERIOR DESIGNER OFFICE ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ಯುವಕ/ಯುವತಿಯರು, ದಾವಣಗೆರೆ ಮತ್ತು ಶಿವಮೊಗ್ಗ ಆಫೀಸಿಗೆ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳದ ಜೊತೆಗೆ ಇನ್ಸೆಂಟಿವ್ ಸೌಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: Mr. SRINIVAS. Y
94485 34659, 83100 92069

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಬಳ 8500/- ಊಟ, ರೂಂ, ಉಚಿತ.
97400 98047, 97400 98064

**ಬೇಕಾಗಿದ್ದಾರೆ**
Sales Excutive For General Insurance Serivce in Davanagere Distc & Taluqs
ಸಂಪರ್ಕಿಸಿ: ಎ.ಎಸ್.ಕೆ. ಅಸೋಸಿಯೇಟ್ಸ್ General Insurance Serivces
70190 29749, 78299 62555

**ಮನೆ ಬಾಡಿಗೆಗೆ ಇದೆ**
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, ಮಲ್ಲಿಗೆ ಹೆಲ್ತ್ ಸೆಂಟರ್ ಬಿಲ್ಡಿಂಗ್, ಆಫೀಸ್ ಅಥವಾ ಕ್ಲಿನಿಕ್‌ಗೆ ಬಾಡಿಗೆಗೆ ಇದೆ.
77955 07876

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟ್ ಮಾರಾಟಕ್ಕಿದೆ**
ರಶ್ಮಿ ಹಾಸ್ಟೆಲ್ ಹತ್ತಿರ, ಎಸ್.ಎಸ್.ಎಂ. ಸ್ಕೂಲ್ ಹಿಂಭಾಗ 27x45 ಉತ್ತರ ದಿಕ್ಕಿನ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ
86181 82332

**WANTED**
+ Office Clerk - 2 + Computer - 2
Quali : BCA/B.Com + Computer, 2nd PUC + Computer, Internet, Basic, M.S.Office, DTP, Photoshop, Tally.
+ Tailoring Teacher (Tailoring Course/ FD) - 2
Experience cmkky/pmkky. Interested may contact with photo, marks card & aadhar card.
Davangere / Harihar
73493 97287, 97417 46205

**Land for sale**
5 Gunta, 10 Gunta, 1 Acre, 2 Acre, 3 Acre
80886 73838

**ಮನೆ ಕಟ್ಟುವವರಿಗೆ ಸಿಹಿ ಸುದ್ದಿ**
ಸಂಕ್ರಾಂತಿವರೆಗೆ ಬಿಲ್ಡಿಂಗ್ ಪ್ಲಾನ್ಸ್ ಉಚಿತವಾಗಿ ಕೊಡಲಾಗುವುದು. (T&C)
ಕಲ್ಪತರು ಕನ್‌ಸ್ಟ್ರಕ್ಷನ್, ದಾವಣಗೆರೆ. ಇಂಜಿನಿಯರ್ ಮತ್ತು ಕಾಂಟ್ರಾಕ್ಟರ್ಸ್
ಮೊ. : 98455 83340

**WANTED**
Social teacher for high School. Qualification : B.A. B.Ed (Ladies only)
Sri Sathya Sai English Medium School
Nituvalli, Davanagere
95358 85997

**ಬಂಗಲೆ ಅಪಾರ್ಟ್‌ಮೆಂಟ್ ಸೈಟ್ ಮಾರಾಟಕ್ಕಿದೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿ 40 ಅಡಿ ರಸ್ತೆಗೆ ಸುತ್ತಲು ಮನೆಗಳು ಇರುವ ಜಾಗದಲ್ಲಿ 105x91 ಸೈಟು ಮಾರಾಟಕ್ಕಿದೆ.
98440 84229, 98448 82366

**DHUDA Approved Sites for Sale**
20x40, 20x30, 30x40 at Harihar
Cell: 80504 91952

**ಅಡಿಕೆ ಸಸಿ ಮಾರಾಟಕ್ಕೆ**
ಉತ್ತಮ ತಳಿಯ ಅಡಿಕೆ ಸಸಿಗಳು ಮಾರಾಟಕ್ಕೆ ಲಭ್ಯವಿವೆ. ದಾವಣಗೆರೆಯಲ್ಲಿ (ದೊಡ್ಡಬಾತಿ) ಸಂಪರ್ಕಿಸಿ.
88920 08800

**ಕೆಲಸಗಾರರು ಬೇಕಾಗಿದ್ದಾರೆ**
ಏರ್‌ಟೆಲ್ ಕಂಪನಿಯಲ್ಲಿ ಕೆಲಸ ಮಾಡಲು ಪ್ರಮೋಟರ್ಸ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ 10,000 + Incentive. ಆಸಕ್ತಿಯುಳ್ಳವರು ಸಂಪರ್ಕಿಸಿ
87922 97357
88842 40439


# ಅಸಮಾನತೆ, ಜಾತಿ ಭೇದ ಮುಂತಾದ ರೋಗಗಳು ಸಮಾಜವನ್ನು ಕಾಡುತ್ತಿವೆ



> ಜಗಳೂರು : ಬುದ್ಧ, ಬಸವ, ಅಂಬೇಡ್ಕರ್ ಶಿಲಾಮೂರ್ತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭೋವಿ ಗುರುಪೀಠದ ಜಗದ್ಗುರು ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ವ್ಯಾಕುಲತೆ

ಜಗಳೂರು, ಜ.5- ಶತಮಾನಗಳು ಉರುಳಿದರೂ ಸಮಾಜದಲ್ಲಿ ಅಸಮಾನತೆ, ಜಾತಿ ಭೇದ ಮುಂತಾದ ರೋಗಗಳು ಸಮಾಜವನ್ನು ಕಾಡುತ್ತಿದ್ದು, ಬುದ್ಧ, ಬಸವ, ಅಂಬೇಡ್ಕರ್ ಅಂತಹವರ ಬೆಳಕಿನಿಂದ ಈ ರೋಗ ಪೀಡಿತ ಸಮಾಜಕ್ಕೆ ಮುಕ್ತಿ ಸಿಗಬಲ್ಲದು ಎಂದು ಚಿತ್ರದುರ್ಗ ಭೋವಿ ಗುರುಪೀಠದ ಜಗದ್ಗುರು ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಜಿ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಯರ್ಲಕಟ್ಟೆ ಗ್ರಾಮದಲ್ಲಿ ಏರ್ಪಾಡಾಗಿದ್ದ ಬುದ್ಧ, ಬಸವ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಶಿಲಾಮೂರ್ತಿಗಳ ಲೋಕಾರ್ಪಣೆ ನೆರವೇರಿಸಿ ಶ್ರೀಗಳು ಮಾತನಾಡಿದರು.

ಸಮಾಜದಲ್ಲಿ ಬಹುಸಂಖ್ಯಾತರ ಹೆಸರಿನಲ್ಲಿ ಹಿಡಿಯಷ್ಟು ಜನ ಎಲ್ಲಾ ಸವಲತ್ತುಗಳನ್ನು ಪಡೆಯುತ್ತಿದ್ದಾರೆ. ಕನಿಷ್ಠ ತಲೆ ಮೇಲೊಂದು ಸೂರು, ತೊಡಲಿಕ್ಕೊಂದು ಬಟ್ಟೆ, ದುಡಿಯಲಿಕ್ಕೊಂದು ಕಾಯಕ ಒದಗಿಸಲಾರದ ಈ ನಾಡು ದ್ವೇಷಾಸೂಯೆಗಳನ್ನು ಮಾತ್ರ ಮುಂದಿನ ಶತಮಾನಗಳಿಗೂ ಆಗುವಷ್ಟು ಬಿತ್ತುತ್ತಿದೆ ಎಂದರು.

ಇದು ಬಹಳ ಆತಂಕದ ವಿಚಾರ. ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ಮನುಷ್ಯನ ದುರಾಸೆ, ದ್ವೇಷ ಮತ್ತು ಹಿಂಸೆಯ ನಿರರ್ಥಕತೆಯನ್ನು ಸಾರಿದ ಬುದ್ಧ ಹಾಗೂ 9 ಶತಮಾನಗಳ ಹಿಂದೆ ಅನುಭವ ಮಂಟಪದ ಮೂಲಕ ವೈಚಾರಿಕ ನೆಲೆಗಟ್ಟಿನಲ್ಲಿ ಕಾಯಕ ಆಧಾರಿತ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಬಸವಣ್ಣ, ಶೋಷಿತರು ಹಾಗೂ ನೊಂದವರಿಗೆ ಆತ್ಮವಿಶ್ವಾಸದ, ಸ್ವಾಭಿಮಾನದ ಬದುಕನ್ನು ಸಂವಿಧಾನದ ಮೂಲಕ ಕಟ್ಟಿಕೊಟ್ಟ ಡಾ. ಅಂಬೇಡ್ಕರ್ ಅವರು ಇಲ್ಲಿ ಸಂಗಮಿಸಿರುವುದು ಅರ್ಥಪೂರ್ಣವಾಗಿದೆ ಎಂದು ಸ್ವಾಮೀಜಿ ಹೇಳಿದರು.

ಶಾಸಕ ಎಸ್.ವಿ. ರಾಮಚಂದ್ರ, ಮಾಜಿ ಶಾಸಕ ಎಚ್.ಪಿ. ರಾಜೇಶ್, ಡಾ. ಹನುಮಂತಪ್ಪ, ವಕೀಲ ಡಿ. ಶ್ರೀನಿವಾಸ್, ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಮಂಜಪ್ಪ, ಅಂಜಿನಪ್ಪ ಇದ್ದರು.

# ತೆರೆದಿರುವ ಒಳಚರಂಡಿ ಬಾಯಿಯನ್ನು ಮುಚ್ಚಿ, ದುರಸ್ತಿಗೊಳಿಸುವಂತೆ ಒತ್ತಾಯ



**ಹರಪನಹಳ್ಳಿ**

ಹರಪನಹಳ್ಳಿ, ಜ.5- ಪಟ್ಟಣದ ತೋಟಗಾರಿಕೆ ಇಲಾಖೆಯ ಹತ್ತಿರ ಇರುವ ಅರಸಿಕೇರಿ - ಕೊಟ್ಟೂರು ಬೈಪಾಸ್ ರಸ್ತೆ ಬಳಿ ಇರುವ ಒಳಚರಂಡಿಯನ್ನು ರಸ್ತೆ ಪಕ್ಕದಲ್ಲಿ ಈ ಹಿಂದೆ ನಿರ್ಮಾಣ ಮಾಡಲಾಗಿದೆ. ಆದರೆ, ಕಳೆದ 15 ದಿನಗಳ ಹಿಂದೆ ಸಿ.ಸಿ.ರಸ್ತೆ ನಿರ್ಮಾಣ ಮಾಡುವಾಗ ಒಳಚರಂಡಿ ಹಾಳಾಗಿದೆ. ತೆರೆದ ಸ್ಥಿತಿಯಲ್ಲಿದ್ದು, ರಸ್ತೆಯಲ್ಲಿ ಓಡಾಡುವ ವಾಹನ ಸವಾರರು ಗುಂಡಿ ತೆರೆದಿರುವುದಕ್ಕೆ ಪುರಸಭೆ ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ. ಕೂಡಲೇ ಅಧಿಕಾರಿಗಳು ಇತ್ತಕಡೆ ಗಮನ ಹರಿಸಿ, ತೆರೆದಿರುವ ಒಳಚರಂಡಿ ಬಾಯಿಯನ್ನು ಮುಚ್ಚಿ, ದುರಸ್ತಿಗೊಳಿಸಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

## ಗ್ರಾಮಾಂತರದಲ್ಲಿ ಇಂದು ವಿದ್ಯುತ್ ಇಲ್ಲ

ಶಿರಮಗೊಂಡನಹಳ್ಳಿ, ನಾಗನೂರು, ಹೊಸ ಬಿಸಲೇರಿ, ಹಳೇ ಬಿಸಲೇರಿ, 6ನೇ ಕಲ್ಲು, 7ನೇ ಕಲ್ಲು ಮತ್ತು ಬನಶಂಕರಿ ಬಡಾವಣೆ 2ನೇ ಹಂತ, ಜೆಎಚ್‌ಪಿ-01 ಫೀಡರ್ ಗ್ರಾಮಗಳಾದ ಹೊಸ ಕುಂದವಾಡ, ಹಳೇಕುಂದವಾಡ, ಕೆಎಚ್‌ಬಿ ಕಾಲೋನಿ, ರಶ್ಮಿ ಸ್ಕೂಲ್ ಸುತ್ತಮುತ್ತ, ಕುಕ್ಕುವಾಡ ಉಪ ವಿದ್ಯುತ್ ಕೇಂದ್ರದಿಂದ ಹೊರಡುವ ಎಲ್ಲಾ 11 ಕೆವಿ ಮಾರ್ಗಗಳಿಗೆ ಇಂದು ಬೆಳಿಗ್ಗೆ 10 ರಿಂದ 6.30 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ಜಗಳೂರು : ಇಂದು ವಿದ್ಯುತ್ ವ್ಯತ್ಯಯ

ಬಿದರಕೆರೆ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳು ಮತ್ತು ನೀರಾವರಿ ಪಂಪ್ ಸೆಟ್ ಮಾರ್ಗಗಳಲ್ಲಿ ಇಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

# ಭದ್ರತೆಯಲ್ಲಿ ಪ್ರಮುಖ ಲೋಪ

(1ನೇ ಪುಟದಿಂದ) ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ತಿಳಿಸಿದ್ದಾರೆ.

ಭದ್ರತಾ ಲೋಪದ ಆರೋಪ ತಳ್ಳಿ ಹಾಕಿರುವ ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಚನ್ನಿ, ಕೊನೆ ಕ್ಷಣದಲ್ಲಿ ಯೋಜನೆ ಬದಲಿಸಲಾಗಿತ್ತು. ಪ್ರಧಾನಿ ಹೆಲಿಕಾಪ್ಟರ್ ಬದಲು ರಸ್ತೆ ಮಾರ್ಗದಲ್ಲಿ ತೆರಳಿದರು ಎಂದಿದ್ದಾರೆ.

ಘಟನೆಯ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಬಿಜೆಪಿ, ಪಂಜಾಬ್‌ನ ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ಪ್ರಧಾನಿಗೆ ದೈಹಿಕ ಹಾನಿ ಮಾಡಲು ಪ್ರಯತ್ನ ನಡೆಸಿತ್ತು ಎಂದು ಹೇಳಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಸಚಿವೆ ಸ್ಮೃತಿ ಇರಾನಿ, ದೇಶದ ಇತಿಹಾಸದಲ್ಲಿ ಎಂದೂ ರಾಜ್ಯ ಸರ್ಕಾರ ಗೊತ್ತಿದ್ದೂ ಪ್ರಧಾನ ಮಂತ್ರಿಗೆ ಹಾನಿಯಾಗುವಂತಹ ಅಡ್ಡಿ ಪಡಿಸಿರಲಿಲ್ಲ ಎಂದಿದ್ದಾರೆ. ಆದರೆ, ಆರೋಪ ತಳ್ಳಿಹಾಕಿರುವ ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲಾ, ಪ್ರಧಾನ ಮಂತ್ರಿ ರಸ್ತೆ ಮಾರ್ಗದ ಮೂಲಕ ತೆರಳುವುದು ಮೊದಲಿನ ಯೋಜನೆಯಲ್ಲಿ ಇರಲಿಲ್ಲ ಎಂದಿದ್ದಾರೆ.

## ಓಮಿಕ್ರಾನ್ : ದೇಶದಲ್ಲಿ ಮೊದಲ ಸಾವು

(1ನೇ ಪುಟದಿಂದ) ನಿರ್ದೇಶಕ ಡಾ. ಬಲರಾಮ್ ಭಾರ್ಗವ ಹೇಳಿದ್ದಾರೆ. ದೆಹಲಿಯಲ್ಲಿ ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣ ಶೇ.3.7ರಷ್ಟು ಹಾಗೂ ಮುಂಬೈನಲ್ಲಿ ಶೇ.5ರಷ್ಟಿದೆ. ಎರಡನೇ ಅಲೆಯಲ್ಲಿ ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣ ಶೇ.20ರವರೆಗೆ ತಲುಪಿತ್ತು ಎಂದವರು ತಿಳಿಸಿದ್ದಾರೆ.

# ತುಲಾಭಾರ ನಾಣ್ಯಗಳು ಶಿಕ್ಷಣಕ್ಕೆ ವಿನಿಯೋಗ



ಹರಪನಹಳ್ಳಿ, ಜ. 5- ಹರ ಜಾತ್ರೆಯಲ್ಲಿ ಪ್ರಥಮ ಬಾರಿಗೆ ನಾಣ್ಯಗಳ ತುಲಾಭಾರ ನಡೆಯಲಿದೆ. ಈ ಸೇವೆಯ ನಾಣ್ಯಗಳನ್ನು ವಿದ್ಯಾರ್ಜನೆಗಾಗಿ ವಿನಿಯೋಗಿಸಲಾಗುವುದು. ಈ ವರ್ಷದಿಂದ ಅಧಿಕೃತವಾಗಿ ಚಾಲನೆ ನೀಡಲಾಗುವುದು ಎಂದು ಹರಿಹರ ಪೀಠದ ಶ್ರೀ ವಚನಾನಂದ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ತೌಡೂರು, ಕಂಚಿಕೇರಿ, ಬೆಂಡಿಗೇರಿ, ಜಿಟ್ಟಿನಕಟ್ಟಿ ಗ್ರಾಮ ದರ್ಶನದ ನಂತರ ತಲುವಾಗಲು ಗ್ರಾಮದಲ್ಲಿ, ಹರಿಹರದಲ್ಲಿ ಇದೇ ದಿನಾಂಕ 14 ಮತ್ತು 15 ರಂದು ನಡೆಯುವ ಹರ ಜಾತ್ರೆಗೆ ಗ್ರಾಮಸ್ಥರನ್ನು ಆಹ್ವಾನಿಸಿ ಶ್ರೀಗಳು ಮಾತನಾಡಿದರು.

ಶ್ರೀ ಪೀಠದಲ್ಲಿ ಬಡ ಮಕ್ಕಳ ಶಿಕ್ಷಣವನ್ನು ಆರಂಭಿಸಲಾಗುತ್ತಿದ್ದು, ಇದಕ್ಕಾಗಿ ಹಾನಗಲ್ ತಾಲ್ಲೂಕಿನ ಶಿಗ್ಗಾಂವ್‌ನ ಭಕ್ತರು ಈ ವರ್ಷ ಆರಂಭಿಸಿದ್ದ ಪರಂಪರೆ ಮುಂದುವರೆಯಲಿದೆ. ಈ ತಾಲ್ಲೂಕಿನ ಬಾಗಳಿ ಗ್ರಾಮದಲ್ಲಿ ಈಗಾಗಲೇ 25 ಸಾವಿರ ರೂ.ಗಳನ್ನು ವಿದ್ಯಾನಿಧಿಗೆ ನೀಡುತ್ತಿದ್ದಾರೆ. ಉಳಿದಂತೆ ಪೀಠಾರೋಹಣ ಸಂದರ್ಭದಲ್ಲಿ ತುಲಾಭಾರ ಕೈಗೊಳ್ಳುವವರು ನಾಣ್ಯದ ಮೂಲಕ ಮಾಡಿದಲ್ಲಿ ಆ ನಾಣ್ಯಗಳನ್ನು ವಿದ್ಯಾನಿಧಿಗೆ ಬಳಕೆ ಮಾಡಲಾಗುವುದು ಎಂದು ಶ್ರೀಗಳು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಪ್ರಕಾಶ್ ಪಾಟೀಲ್, ಮುಖಂಡರಾದ ಜಿ.ಕೆ. ಮಲ್ಲಿಕಾರ್ಜುನ್, ಮತ್ತಿಹಳ್ಳಿ ಅಜ್ಜಣ್ಣ, ಶಶಿಧರ ಪೂಜಾರ, ಚಂದ್ರಶೇಖರ ಪೂಜಾರ, ಎಂ.ಬಿ. ಯಶವಂತಗೌಡ, ವಸಂತ ಹುಲ್ಲತ್ತಿ, ಡಾ. ಮಲ್ಲಪ್ಪ ಅಧಿಕಾರ್, ಸೋಮನಗೌಡ ಪಾಟೀಲ್, ಶ್ರೀಮತಿ ಅಡವಿಹಳ್ಳಿ ಮಂಜುನಾಥ, ಜೆ. ಓಂಕಾರಗೌಡ, ಚನ್ನನಗೌಡ, ಮಹೇಶ ಪೂಜಾರ, ಎಸ್. ಸುರೇಶ್, ಸಿ. ರುದ್ರಪ್ಪ, ನಾಗರಾಜ ಉಪಸ್ಥಿತರಿದ್ದರು.

# ಮಲಬಾರ್‌ನಿಂದ ಭಾರತ - ವಿದೇಶಗಳಲ್ಲಿ 22 ಹೊಸ ಶೋ ರೂಂ



**800 ಕೋಟಿ ರೂ. ಹೂಡಿಕೆಯಿಂದ 5,000 ಉದ್ಯೋಗ : ಮಲಬಾರ್ ಅಧ್ಯಕ್ಷ ಎಂ.ಪಿ. ಅಹ್ಮದ್**

ಕೋಳಿಕ್ಕೋಡ್, ಜ. 5 - ಜಾಗತಿಕ ವಿಸ್ತರಣೆ ಯೋಜನೆಯ ಭಾಗವಾಗಿ ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಸಂಸ್ಥೆಯು ಜನವರಿಯಲ್ಲಿ ಭಾರತ ಹಾಗೂ ವಿದೇಶಗಳಲ್ಲಿ 22 ಹೊಸ ಶೋ ರೂಂಗಳನ್ನು ತೆರೆಯಲಿದೆ ಎಂದು ಮಲಬಾರ್ ಸಮೂಹದ ಅಧ್ಯಕ್ಷ ಎಂ.ಪಿ. ಅಹ್ಮದ್ ತಿಳಿಸಿದ್ದಾರೆ.

ಭಾರತದಲ್ಲಿ 10 ಹಾಗೂ ಉಳಿದವನ್ನು ಪಶ್ಚಿಮ ಏಷಿಯಾ ಮತ್ತು ಆಗ್ನೇಯ ಏಷಿಯಾದಲ್ಲಿ ಆರಂಭಿಸಲಾಗುವುದು. ದೇಶದ ಎರಡು ಹಾಗೂ ಮೂರನೇ ಹಂತದ ಪಟ್ಟಣಗಳಿಗೂ ಮಲಬಾರ್ ವಿಸ್ತರಣೆಯಾಗುತ್ತಿದೆ ಎಂದವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಬೆಂಗಳೂರಿನ ಎಂ.ಜಿ. ರಸ್ತೆಯಲ್ಲಿ ಇದೇ ದಿನಾಂಕ 8ರಂದು ಆರ್ಟಿಸ್ಟ್ರಿ ಕಾನ್ಸೆಪ್ಟ್ ಮಳಿಗೆ ಪ್ರಾರಂಭವಾಗುವುದರೊಂದಿಗೆ, ವಿಸ್ತರಣಾ ಅಭಿಯಾನ ಆರಂಭವಾಗಲಿದೆ. ನಂತರ ಮಹಾರಾಷ್ಟ್ರದ ಸೊಲ್ಲಾಪುರ ಹಾಗೂ ಪುಣೆ, ತೆಲಂಗಾಣದ ಸಿದ್ದಿಪೇಟ್, ಉತ್ತರಪ್ರದೇಶದ ವಾರಣಾಸಿಗಳಲ್ಲದೇ ಕತಾರ್‌ನ ಘರಾಫಾದ ಲ್ಯಾಂಡ್‌ಮಾರ್ಕ್ ಶಾಪಿಂಗ್ ಮಾಲ್, ಅಲ್ - ಮೀರಾಜೆರ್ಯನ್ ಜೆನೈಹತ್, ಮಸ್ಕತ್‌ನ ಓಮನ್‌ನ ಅಲ್ - ಖೌದ್ ಮಾಲ್ ಮತ್ತು ಮಾಲ್ ಆಫ್ ಓಮನ್ ಮತ್ತಿತರೆ ಕಡೆಗಳಲ್ಲಿ ಶೋರೂಂಗಳು ತೆರೆಯಲಿವೆ.

ಈ ವಿಸ್ತರಣೆಗಳಲ್ಲಿ 800 ಕೋಟಿ ರೂ.ಗಳ ಹೂಡಿಕೆಯಾಗಲಿದೆ ಮತ್ತು 5,000 ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದವರು ತಿಳಿಸಿದ್ದಾರೆ.

ಮಲಬಾರ್ ಗೋಲ್ಡ್ 750 ಮಳಿಗೆಗಳನ್ನು ತೆರೆಯಲಿದೆ ಮತ್ತು ವಿಶ್ವದ ಮುಂಚೂಣಿ ರಿಟೇಲರ್‌ಗಳಲ್ಲಿ ಒಂದಾಗಲಿದೆ. ಮೇಕ್ ಇನ್ ಇಂಡಿಯಾ ಹಾಗೂ ವಿಶ್ವಕ್ಕೆ ಮಾರಾಟ ಮಾಡುವುದು ನಮ್ಮ ಬದ್ಧತೆ ಎಂದೂ ಅವರು ಹೇಳಿದ್ದಾರೆ.

ನಮ್ಮ ಉತ್ಪನ್ನಗಳಲ್ಲಿ ಸಂಶೋಧನೆಗಳನ್ನು ಮಾಡುತ್ತಿರುವುದರಿಂದ ಗ್ರಾಮೀಣ ಹಾಗೂ ನಗರ ಮಾರುಕಟ್ಟೆಗಳಲ್ಲಿ ಸಾಮರ್ಥ್ಯ ವಿಸ್ತರಿಸುತ್ತಿದೆ ಎಂದು ಮಲಬಾರ್ ಗೋಲ್ಡ್‌ನ ಭಾರತೀಯ ವಿಭಾಗದ ಕಾರ್ಯಾಚರಣೆಗಳ ವ್ಯವಸ್ಥಾಪಕ ನಿರ್ದೇಶಕ ಓ. ಅಷರ್ ಹೇಳಿದ್ದಾರೆ.

ವಿಸ್ತರಣೆಯ ಯೋಜನೆಗಳು ಸ್ಥಳೀಯ ಹಾಗೂ ಅಂತರರಾಷ್ಟ್ರೀಯವಾಗಿ ಸಂಸ್ಥೆಯ ಸ್ಥಾನ ಮತ್ತಷ್ಟು ಭದ್ರಪಡಿಸಲಿವೆ ಎಂದು ಅಂತರರಾಷ್ಟ್ರೀಯ ಕಾರ್ಯಾಚರಣೆಗಳ ವ್ಯವಸ್ಥಾಪಕ ನಿರ್ದೇಶಕ ಶಮಲಾಲ್ ಅಹ್ಮದ್ ತಿಳಿಸಿದ್ದಾರೆ.

# ದುಡಿದರೆ ಫಲ ಕಟ್ಟಿಟ್ಟ ಬುತ್ತಿ

(1ನೇ ಪುಟದಿಂದ) ಯೌವನ ಮತ್ತು ಕಾಲ ಯಾರನ್ನೂ ಕಾಯುವುದಿಲ್ಲ. ಒಮ್ಮೆ ಕಳೆದರೆ ಮತ್ತೆಂದೂ ಮರಳಿ ಬರಲಾರದು. ಸ್ನೇಹ, ವಿದ್ಯೆ ಮತ್ತು ಸಂಬಂಧ ಬೆಳೆಸಿ ಆರೋಗ್ಯ ಪೂರ್ಣ ಬದುಕನ್ನು ಕಟ್ಟಿಕೊಳ್ಳಬೇಕಾಗಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಮಾನವೀಯತೆಯ ಸದ್ಗುಣ, ಸಂಸ್ಕಾರಗಳನ್ನು ಎಲ್ಲ ವರ್ಗದ ಜನ ಸಮುದಾಯಕ್ಕೆ ಬೋಧಿಸಿ ಬಾಳಿಗೆ ಬೆಳಕು ತೋರಿದರು ಎಂದರು.

ಬಿಚಗುಂದ ಮಠದ ಸೋಮಲಿಂಗ ಶ್ರೀ, ಸಿದ್ಧರಬೆಟ್ಟ ಕ್ಷೇತ್ರದ ವೀರಭದ್ರ ಶ್ರೀ, ಮಳಲಿಮಠದ ಡಾ|| ನಾಗಭೂಷಣ ಶ್ರೀ, ಮೇಹಕರ ಹಿರೇಮಠದ ರಾಜೇಶ್ವರ ಶ್ರೀ, ಜವಳಿಮಠದ ಗಂಗಾಧರ ಸ್ವಾಮೀಜಿ ಪಾಲ್ಗೊಂಡು ನುಡಿ ನಮನ ಸಲ್ಲಿಸಿದರು. ದೇವಸ್ಥಾನದ ಅರ್ಚಕ ಸೋಮಯ್ಯ ಸ್ವಾಮಿ ಮತ್ತು ಗಂಗಾಧರ ಸ್ವಾಮಿ ಪೂಜಾ ವಿಧಿಗಳನ್ನು ನೆರವೇರಿಸಿದರು. ಶ್ರೀ ಪೀಠದ ಗಂಗಾಧರ ಸ್ವಾಮಿ ಮತ್ತು ಗದಿಗೆಯ್ಯಸ್ವಾಮಿ ರುದ್ರ ಪಠಣ ಮಾಡಿದರು.

ಟ್ರಸ್ಟಿನ ಕಾರ್ಯದರ್ಶಿ ಅಣ್ಣಾರಾವ ಬಿರಾದಾರ, ಶಿವಶರಣಪ್ಪ ಸೀರಿ, ಪ್ರಭುಲಿಂಗ ಶಾಸ್ತ್ರಿಗಳು, ಅಶೋಕ ಸಿದ್ದಾಪುರ ಹಾಗು ಅನೇಕ ಭಕ್ತರು ಪಾಲ್ಗೊಂಡಿದ್ದರು. ಕಲಬುರ್ಗಿಯ ಗಿರಿಯಪ್ಪ ಮುತ್ಯಾ ಸಂಗಡಿಗರು ಅನ್ನ ದಾಸೋಹ ಸೇವೆ ಸಲ್ಲಿಸಿದರು.


**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**ರೂಂ ಬಾಡಿಗೆಗೆ ಇದೆ**
ಕೆ.ಬಿ. ಬಡಾವಣೆಯ ಕಿರುವಾಡಿ ಲೇಔಟ್‌ನಲ್ಲಿ ಮೊದಲ ಅಂತಸ್ತಿನಲ್ಲಿ ರೂಂ ಬಾಡಿಗೆಗಿದೆ. ಆಸಕ್ತರು ಸಂಪರ್ಕಿಸಿ :-
ಮೊ: 98444 26622
83104 82455

**WANTED**
1. Order Booking Boy
2. Delivery Boys
A.K.TRADERS
Ashirwad
Bapuji Hospital Road
P.J Extension, Davangere-4.

**ಬೇಕಾಗಿದ್ದಾರೆ**
ಶಾಲೆಯಲ್ಲಿ ಕೆಲಸ ಮಾಡಲು ಆಯಾ ಬೇಕಾಗಿದ್ದಾರೆ. ಸಂಪರ್ಕಿಸಿ :
ಎಂ.ಇ.ಎಸ್. ಕಾನ್ವೆಂಟ್
9ನೇ ಕ್ರಾಸ್, ಆಂಜನೇಯ ಬಡಾವಣೆ ದಾವಣಗೆರೆ. ಫೋ. : 98804 36414

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 94837 64859

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಕೈ ಹಿಡಿದು ನಡೆಸಿದ ಅಪ್ಪ-ಅಮ್ಮರ ನೆನಪಲ್ಲಿ**



ದಿ|| ಕೊಂಡಜ್ಜಿ ಈಶ್ವರಪ್ಪನವರು
ನಿಧನ : 06.01.1984



ದಿ|| ಅನ್ನಪೂರ್ಣಮ್ಮ ಕೊಂಡಜ್ಜಿ
ನಿಧನ : 06.06.2008

ನಮ್ಮೆಲ್ಲರನ್ನು ಕೈ ಹಿಡಿದು ನಡೆಸಿ
ತಪ್ಪು ಹೆಜ್ಜೆಗಳನ್ನು ತಿದ್ದಿ ತೀಡಿ
ನಮಗೆ ಬದುಕು ದೊರಕಿಸಿಕೊಟ್ಟ ನೀವು
ನಿತ್ಯ ಸ್ಮರಣೀಯರು

ವರ್ಷಗಳೆಷ್ಟೇ ಕಳೆಯಲಿ,
ನಿಮ್ಮ ನೆನಪು
ನಮ್ಮೆದೆಗಳಲ್ಲಿ ಹಚ್ಚ ಹಸಿರಾಗಿದೆ....
ನೀವಿಟ್ಟ ಹೆಜ್ಜೆಗಳ ಮೇಲೆ ನಡೆಯುತ್ತಿರುವ.....

ಶ್ರೀಮತಿ ಶ್ರೀ ಕೊಂಡಜ್ಜಿ ಜಯಪ್ರಕಾಶ್ — ಶ್ರೀಮತಿ ಶ್ರೀ ಯೋಗೀಶ್ ಕೊಂಡಜ್ಜಿ
ಶ್ರೀಮತಿ ಶ್ರೀ ಭೀಮರಾಜ್ ಕೊಂಡಜ್ಜಿ — ಶ್ರೀಮತಿ ಶ್ರೀ ಗಿರೀಶ್ ಕೊಂಡಜ್ಜಿ
ಚಿ|| ಗಂಗಾ BE, ಚಿ|| ಗಾನವಿ, ಚಿ|| ತೇಜಸ್

ಶ್ರೀಮತಿ ಮತ್ತು ಶ್ರೀ ಜಿ.ಹೆಚ್. ರಾಜಕುಮಾರ್ ಮತ್ತು ಮಕ್ಕಳು — ದಿ|| ಸಾಲೇರ ಸಿದ್ದಪ್ಪನವರ ಮಕ್ಕಳು
ಶ್ರೀಮತಿ ಮತ್ತು ಶ್ರೀ ಜಿ.ಹೆಚ್. ಶಿವಕುಮಾರ್ ಮತ್ತು ಮಕ್ಕಳು — ಶ್ರೀಮತಿ ಶ್ರೀ ಎ.ಎಂ. ಜಯದೇವಪ್ಪ ಮತ್ತು ಮಕ್ಕಳು
ಶ್ರೀಮತಿ ಕವಿತಾ ಡಾ|| ಜಿ.ಹೆಚ್. ಮಂಜುನಾಥ್ — ಶ್ರೀಮತಿ ಸರ್ವಮಂಗಳಮ್ಮ ಪುರದಪ್ಪ ಮತ್ತು ಮಕ್ಕಳು
ಶ್ರೀಮತಿ, ಶ್ರೀ ಎಂ.ಎಸ್. ಪಾಟೀಲ್ ಮತ್ತು ಮಕ್ಕಳು

ಅಂತರವಳ್ಳಿ ಮನೆತನದವರು ಕೊಂಡಜ್ಜಿ ಹಾಗೂ ಬಂಧು-ಮಿತ್ರರು.

**WANTED**
Need Telecaller for Banking Products. Intrested Candidats Please Contact us
88676 37350
73534 80873

**ಮನೆ ಮಾರಾಟಕ್ಕಿದೆ**
ಜಯನಗರ ಎ ಬ್ಲಾಕ್‌ನಲ್ಲಿರುವ ಕಾಳಿದಾಸ ಸರ್ಕಲ್ ಹಿಂಭಾಗ ಕಾರ್ನರ್ ಪಶ್ಚಿಮ ದಿಕ್ಕಿನಲ್ಲಿರುವ (30×40) ಎರಡು ಅಂತಸ್ತಿನ ಸುಸಜ್ಜಿತ ವ್ಯವಸ್ಥೆಯ ಹೊಸ ಮನೆ ಮಾರುವುದಿದೆ. ಡೋರ್ ನಂ.790/6/176
ಸಂಪರ್ಕಿಸಿ: 94827 64316

**ಬೇಕಾಗಿದ್ದಾರೆ**
ಸೇಲ್ಸ್ ಮಾಡಲು ಪುರುಷರು ಬೇಕಾಗಿದ್ದಾರೆ. ವಾಹನ ಇದ್ದವರಿಗೆ ಅವಕಾಶ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ
94487 51313

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
Near Coffee day, Nutana College Road, Vidyanagara, 2nd Main, Davangere
77603 16576
90080 55813

**Dog Boarding**
ನೀವು ವಿದೇಶಕ್ಕೆ ಹೋಗಲಿದ್ದೀರಾ, ಆರೋಗ್ಯ ಸರಿ ಇಲ್ವಾ, ಮನೆಯಲ್ಲಿ ಮಕ್ಕಳು ಇರುವುದರಿಂದ ನಿಮ್ಮ ಪ್ರೀತಿಯ ನಾಯಿಯನ್ನು ನೋಡಿಕೊಳ್ಳಲು ಆಗುತ್ತಿಲ್ಲವೇ, ಹಾಗಿದ್ದರೆ ನಿಮ್ಮ ಪ್ರೀತಿಯ ನಾಯಿಯನ್ನು ನಮ್ಮ ಬಳಿ ಬಿಡಿ. ನಾವು ನಿಮ್ಮ ಪ್ರೀತಿಯ ನಾಯಿ ಆಹಾರ, ಆರೋಗ್ಯ ಮತ್ತು ವಸತಿ ಸಂಪೂರ್ಣ ನಮ್ಮ ಜವಾಬ್ದಾರಿ.
ಆವರಗೆರೆ ಹತ್ತಿರ, SP ಲೇಔಟ್ ದಾವಣಗೆರೆ.
98444 92134

**House To-Let**
2BHK 'Santrupthi'
# 1640/66-67, Saraswati Badavane, Davanagere.
Veg only
94484 46708

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ಇಂದು 06.01.2022ರ ಗುರುವಾರದಂದು ಮಾತ್ರ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**WANTED**
WORKING PHARMACIST
Qualification : D. Pharma/B. Pharma, Age Below 30 Years, Salary Scale : Rs.12000 to 16000
ಕಾವೇರಿ ಮೆಡಿಹೌಸ್ ಪ್ರೈ. ಲಿ
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-577002

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ.

**ಜಿ. ಬೇವಿನಹಳ್ಳಿ ಹೊನ್ನಮ್ಮ ನಿಧನ**



ಹರಿಹರ ತಾ. ಜಿ. ಬೇವಿನಹಳ್ಳಿ ಗ್ರಾಮದ ಮುಖಂಡರಾದ ಹೆಚ್.ಬಿ. ಶ್ರೀಕಾಂತ್ ಅವರ ತಾಯಿ ಹಾಗೂ ದಿ.ಹೊಟ್ಟೆ ಸಿದ್ದಪ್ಪರ ಬಸಪ್ಪನವರ ಧರ್ಮಪತ್ನಿ ಶ್ರೀಮತಿ ಹೊನ್ನಮ್ಮ (88 ವರ್ಷ) ಇವರು ದಿನಾಂಕ 05.01.2022ರ ಬುಧವಾರ ಬೆಳಗ್ಗೆ 8.50ಕ್ಕೆ ನಿಧನರಾದರು. ಮೂವರು ಪುತ್ರರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 05.01.2022ರ ಬುಧವಾರ ಸಂಜೆ ಜಿ. ಬೇವಿನಹಳ್ಳಿಯಲ್ಲಿ ನೆರವೇರಿತು.

**ತಕ್ಷಣ ಬೇಕಾಗಿದ್ದಾರೆ**
ಕೊರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಡ್ರೈವರ್ ತಕ್ಷಣ ಬೇಕಾಗಿದ್ದಾರೆ. ಇಂಗ್ಲಿಷ್ ಓದಲು, ಬರೆಯಲು ಬರಬೇಕು. ಆಸಕ್ತಿ ಇದ್ದಲ್ಲಿ ಮೂಲ ದಾಖಲಾತಿಯೊಂದಿಗೆ ಸಂಪರ್ಕಿಸಿ
98800 42597, 94807 95548

**ಮಿಯಾ ಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಚೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ.
ಮೊ : 81339 33804

|| ಶ್ರೀ ವೀರಭದ್ರೇಶ್ವರ ಪ್ರಸನ್ನ ||
**ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆ**



ದಾವಣಗೆರೆ ಸಿಟಿ, ಪಿ.ಜೆ. ಬಡಾವಣೆ ವಾಸಿ ಶ್ರೀಮತಿ ಜ್ಯೋತಿ ಶ್ರೀ ಜಿ.ಬಿ. ಜಯಕುಮಾರ್ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು. ದಿನಾಂಕ 29.12.2021ನೇ ಬುಧವಾರ ಬೆಳಿಗ್ಗೆ 3.35ಕ್ಕೆ ನನ್ನ ಪೂಜ್ಯ ತಂದೆ **ನೇತ್ರದಾನಿ ಶ್ರೀ ಗೌಡರ ಬಕ್ಕಪ್ಪನವರು** ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ 6.01.2022ನೇ ಗುರುವಾರ ಬೆಳಿಗ್ಗೆ 11.30ಕ್ಕೆ ದಾವಣಗೆರೆ ಸಿಟಿ, ಪಿ.ಜೆ. ಬಡಾವಣೆ, 5ನೇ ಮೇನ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ಮಗ, ಸೊಸೆ, ಮೊಮ್ಮಕ್ಕಳು ಹಾಗೂ ಗೌಡರ ವಂಶಸ್ಥರು ಮತ್ತು ಬಂಧು-ಮಿತ್ರರು. ಮೊ: 99166 38156, 99160 94114

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

# ಮಠದ ಪೀಠಾಧಿಪತಿ ಆಯ್ಕೆ ಮುಂದಕ್ಕೆ

**(1ನೇ ಪುಟದಿಂದ)** ಕಾರ್ಯಗಳನ್ನು ನೆರವೇರಿಸಿಕೊಂಡು, ಕರ್ತೃಗದ್ದುಗೆಯ ಆವಿಗೆಗಳನ್ನು ಹೊತ್ತ ಹಾಲಸ್ವಾಮಿ ಉತ್ಸವ ಮೂರ್ತಿಯ ಪಲ್ಲಕ್ಕಿಯನ್ನು ಇಬ್ಬರು ಭಕ್ತರ ಮೂಲಕ ಹೊರಿಸಿ ಅಲ್ಲಿಯೇ ಭಕ್ತರು ಕರೆತಂದಿದ್ದ ಎರಡು ಪುಟ್ಟ ಮಕ್ಕಳ ಜೇಬಿನಲ್ಲಿ ಈ ಎರಡು ವಿಷಯ ಕುರಿತಾದ ಚೀಟಿ ಬರೆದಿಟ್ಟಿರುವುದನ್ನು ತೋರಿಸಲು ಸೂಚಿಸಿದರು.

ಉತ್ಸವ ಮೂರ್ತಿಗೆ ಹೇಳಿದಾಗ ಅದು ಪುತ್ರವರ್ಗ ಮಠ ಇದಕ್ಕೆ ಪುತ್ರ ವರ್ಗದಲ್ಲಿಯೇ ಉತ್ತರಾಧಿಕಾರಿ ಮಾಡಬೇಕು ಎಂಬ ಚೀಟಿ ಇಟ್ಟುಕೊಂಡ ಮಗುವನ್ನು ಉತ್ಸವಮೂರ್ತಿ ತೋರಿಸಿದ್ದು, ಎರಡೂ ಪಂಗಡಗಳ ಮಧ್ಯೆ ಹುಟ್ಟಿದ ಒಂದು ಗೊಂದಲಕ್ಕೆ ತೆರೆ ಬಿದ್ದಂತಾಗಿತ್ತು.

ಮುಂದುವರಿದ ಭಾಗವಾಗಿ ಪುತ್ರ ವರ್ಗದಲ್ಲಿ ಉತ್ತರಾಧಿಕಾರಿ ಆಗ ಬಯಸುವ ಆಕಾಂಕ್ಷಿಗಳ ಪಟ್ಟಿ ಕಾಶಿ ಶ್ರೀಗಳ ಕೈ ಸೇರಬೇಕಿದ್ದು, ಆನಂತರದಲ್ಲಿ ಅವರುಗಳ ಜಾತಕ ಫಲಗಳನ್ನು ಆಧರಿಸಿ ಮತ್ತೆ ಅಂತಿಮ ಆಯ್ಕೆ ಮಾಡಲಾಗುವುದು ಎಂದು ಕೊನೆಯದಾಗಿ ಕಾಶಿ ಶ್ರೀಗಳು ಹೇಳಿದರು.

ಮಧ್ಯಾಹ್ನದ ನಂತರ ಅಂದಿನಿಂದ ಇಂದಿನವರೆಗೆ ಮಠದ ಉಸ್ತುವಾರಿ ನೋಡಿಕೊಳ್ಳುತ್ತಿರುವ ಲಿಂಗೈಕ್ಯ ಶ್ರೀಗಳ ಸಹೋದರ ಶಿವಕುಮಾರ ಸ್ವಾಮಿಗಳು, ಮುಂದಿನ ದಿನಗಳಲ್ಲಿ ಉಸ್ತುವಾರಿ ಮಾಡಬೇಕೇ? ಬೇಡವೇ? ಎಂಬ ವಾಕ್ ಸಮರ ಎರಡೂ ಪಂಗಡಗಳ ಮಧ್ಯೆ ಗಂಟೆಗಟ್ಟಲೇ ನಡೆದಿದ್ದನ್ನು ಮೂಕ ಪ್ರೇಕ್ಷಕರಂತೆ ವೀಕ್ಷಣೆ ಮಾಡಿದ ಕಾಶಿ ಶ್ರೀಗಳು, ಕಡೆಯದಾಗಿ ಈ ವಿಚಾರವನ್ನು ನಾಳೆ ದಿನ ಮತ್ತೆ ಉತ್ಸವ ಮೂರ್ತಿಯನ್ನು ಹೊರಡಿಸಿ ಅಂತ್ಯಗೊಳಿಸುವ ನಿರ್ಧಾರ ಮಾಡಿ ಸಭೆಯನ್ನು ಅಂತ್ಯಗೊಳಿಸಿದರು.

ಕಾರ್ಯಕ್ರಮದಲ್ಲಿ ಹೊನ್ನಾಳಿ ಹಿರೇ ಕಲ್ಮಠದ ಶ್ರೀ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮೀಜಿ, ಶ್ರೀ ಹೊಟ್ಯಾಪುರ ಹಿರೇಮಠದ ಶ್ರೀ ಗಿರಿಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಅಳವಂಡಿ ಮಠದ ಶ್ರೀ ಮರುಳುಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಕೊಟ್ಟೂರು ಜಾನಕೋಟಿ ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಹಿರೇಹಡಗಲಿ ಹಾಲಸ್ವಾಮಿ ಮಠ, ರಾಂಪುರ ಹಾಲಸ್ವಾಮಿ ಮಠದ ಶಾಖಾ ಮಠದ ಹತ್ತಾರು ಮಠಾಧೀಶ್ವರರು ಉಪಸ್ಥಿತರಿದ್ದರು.

ಮಠದ ಆವರಣದಲ್ಲಿ ಹೊನ್ನಾಳಿ ಸಿಪಿಐ ದೇವರಾಜ್, ಪಿಎಸ್ಐ ಬಸವನಗೌಡ ಬಿರಾದಾರ್ ತಂಡ ಬೀಡುಬಿಟ್ಟಿದ್ದು ಮಠಕ್ಕೆ ಸೂಕ್ತ ಭದ್ರತೆ ಒದಗಿಸಿದೆ.

ಈ ಹಿಂದೆ ಪೀಠಾಧ್ಯಕ್ಷರಾಗಿದ್ದ ಶ್ರೀ ವಿಶ್ವೇಶ್ವರ ಶಿವಾಚಾರ್ಯ ಹಾಲಸ್ವಾಮೀಜಿ ಅನಾರೋಗ್ಯದ ಕಾರಣ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಕೋವಿಡ್‌ನಿಂದ ಜುಲೈ 15, 2020 ರಂದು ಲಿಂಗೈಕ್ಯರಾಗಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

# ಮು. ಗೋವಿಂದರಾಜ್ ಭಾವಚಿತ್ರಕ್ಕೆ ಅಪಮಾನ






## ಕರ್ನಾಟಕ ರಕ್ಷಣಾ ವೇದಿಕೆಯಿಂದ ಪ್ರತಿಭಟನೆ

ದಾವಣಗೆರೆ, ಜ.5- ಕನ್ನಡಪರ ಹೋರಾಟಗಾರ ದಿ. ಮು. ಗೋವಿಂದರಾಜ್ ಅವರ ಭಾವಚಿತ್ರವನ್ನು ಹರಿದು ಹಾಕುವ ಮೂಲಕ ಅಪಮಾನ ಮಾಡಿರುವ ಕೃತ್ಯವನ್ನು ಖಂಡಿಸಿ, ನಗರದಲ್ಲಿ ಇಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ಸಂಘಟನೆಯ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ನೇತೃತ್ವದಲ್ಲಿ ಬಡಾವಣೆ ಪೊಲೀಸ್ ಠಾಣೆಗೆ ತೆರಳಿದ ಪದಾಧಿಕಾರಿಗಳು, ಪೊಲೀಸ್ ಉಪಾಧೀಕ್ಷಕ ನರಸಿಂಹ ವಿ. ತಾಮ್ರಧ್ವಜ ಹಾಗೂ ಆರಕ್ಷಕ ನಿರೀಕ್ಷಕ ಸುರೇಶ್ ಸಗರಿ ಅವರುಗಳಿಗೆ ಮನವಿ ಸಲ್ಲಿಸಿದರು.

ಡಾ. ಮೋದಿ ವೃತ್ತದ ಬಳಿ ನಾಡು - ನುಡಿಗೆ ಶ್ರಮಿಸಿದ ಹಲವಾರು ಹೋರಾಟಗಾರರ ಭಾವಚಿತ್ರಗಳನ್ನು ಇಂದಿನ ಯುವ ಪೀಳಿಗೆಗೆ ಪರಿಚಯಿಸುವ ಸಲುವಾಗಿ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದಿಂದ ಹಾಕಲಾಗಿದ್ದು, ಈ ಮಹನೀಯರ ಪೈಕಿ ಕನ್ನಡಕ್ಕಾಗಿ ಪ್ರಾಣವನ್ನೇ ಬಲಿದಾನ ಮಾಡಿದ ಮು. ಗೋವಿಂದರಾಜ್ ಭಾವಚಿತ್ರವನ್ನು ನಾಡ ದ್ರೋಹಿಗಳು ಹರಿದು ಹಾಕಿದ್ದಾರೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಹೀಗೆ ನಗರದಲ್ಲಿ ಅಶಾಂತಿಯನ್ನು ಉಂಟು ಮಾಡುವ ನಾಡ ದ್ರೋಹಿಗಳನ್ನು ತಕ್ಷಣ ಗೂಂಡಾ ಕಾಯ್ದೆಯಡಿ ಬಂಧಿಸಬೇಕು. ಸಿಸಿಟಿವಿ ಪರಿಶೀಲಿಸಿ ಕಿಡಿಗೇಡಿಗಳನ್ನು ವಶಕ್ಕೆ ಪಡೆದು ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಕರವೇ ಹೋರಾಟಕ್ಕಿಳಿಯಲಿದೆ ಎಂದು ರಾಮೇಗೌಡ ಎಚ್ಚರಿಸಿದರು.

ಈ ಸಂದರ್ಭದಲ್ಲಿ ಕೆ.ಜಿ. ಬಸವರಾಜ್, ಸಂತೋಷ್, ಮಹೇಶ್ವರಪ್ಪ, ಮಂಜುಳ ಮಾಂತೇಶ್, ಸಾಕಮ್ಮ, ಎಂ.ಡಿ. ರಫೀಕ್, ಜಬಿವುಲ್ಲಾ, ಅಯೂಬ್, ಪರಮೇಶ್, ಬಸವರಾಜು, ಕಾಲ್ ಚೌದ್ರಿ ಇಬ್ರಾಹಿಂ , ಸಂಜು, ದೀರೇಂದ್ರ, ತುಳಸಿರಾಮ್, ರಾಕೇಶ್, ನವೀನ್, ದಾದಾಪೀರ್, ಪ್ರಕಾಶ್ ಸೇರಿದಂತೆ ಇತ್ತರರು ಉಪಸ್ಥಿತರಿದ್ದರು.

## ಹರಿಹರದಲ್ಲಿ 10 ರಿಂದ ಕುಸ್ತಿ ಪಂದ್ಯಾವಳಿ

ಹರಿಹರ, ಜ.5- ಶ್ರೀ ಹರಿಹರ ಕುಸ್ತಿ ಜೀರ್ಣೋದ್ಧಾರ ಸಮಿತಿ ಮತ್ತು ಕರ್ನಾಟಕ ರಾಜ್ಯ ಕುಸ್ತಿ ಸಂಘ ಇವರುಗಳ ಸಂಯುಕ್ತಾಶ್ರಯದಲ್ಲಿ ನಾಡಿದ್ದು ದಿನಾಂಕ 7 ರಿಂದ 9 ರವರೆಗೆ ನಡೆಯಬೇಕಿದ್ದ ರಾಜ್ಯ ಮಟ್ಟದ ಹೊನಲು ಬೆಳಕಿನ ಕುಸ್ತಿ ಪಂದ್ಯಾವಳಿಗಳನ್ನು ಇದೇ ದಿನಾಂಕ 10ರ ಸೋಮವಾರದಿಂದ 12ರ ಬುಧವಾರದವರೆಗೆ ನಡೆಸಲಾಗುತ್ತದೆ. ಕುಸ್ತಿ ಪಟುಗಳ ದೇಹ, ತೂಕವನ್ನು ದಿನಾಂಕ 10ರ ಬೆಳಿಗ್ಗೆ 8 ರಿಂದ ಮಧ್ಯಾಹ್ನ 3 ರವರೆಗೆ ತೆಗೆದುಕೊಳ್ಳಲಾಗುವುದು.

## ಕ್ರೀಡಾಪಟುಗಳ ಶೈಕ್ಷಣಿಕ ಶುಲ್ಕಕ್ಕೆ ಕರೆ

ದಾವಣಗೆರೆ, ಜ.5- ಅಧಿಕೃತ ರಾಷ್ಟ್ರೀಯ ಕ್ರೀಡಾ ಸಂಸ್ಥೆಗಳು ಆಯೋಜಿಸುವ ತಂಡದಲ್ಲಿ ಭಾಗವಹಿಸಿ, ಉತ್ತಮ ಸಾಧನೆ ಮಾಡಿದ ರಾಜ್ಯದ ಕ್ರೀಡಾಪಟುಗಳ ಶೈಕ್ಷಣಿಕ ಶುಲ್ಕವನ್ನು ಮರುಪಾವತಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 13 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ದಾವಣಗೆರೆ ಅಥವಾ ಕಛೇರಿ ದೂರವಾಣಿ 08192-237480 ಸಂಪರ್ಕಿಸಬಹುದು.

## ಉಕ್ಕಡಗಾತ್ರಿಯಲ್ಲಿ ಇಂದು

ಉಕ್ಕಡಗಾತ್ರಿ ಗ್ರಾಮದ ಸಾರ್ವಜನಿಕ ರುದ್ರಭೂಮಿಗೆ ಬುದ್ಧ, ಬಸವ, ಅಂಬೇಡ್ಕರ್ ಮುಕ್ತಿಧಾಮ ಎಂದು ನಾಮಕರಣ ಮಾಡಲಾಗಿದ್ದು, ಇಂದು ಮಧ್ಯಾಹ್ನ 12 ಗಂಟೆಗೆ ನಾಮಫಲಕ ಅನಾವರಣ ಹಾಗೂ ಸಸಿ ನೆಡುವ ಕಾರ್ಯಕ್ರಮವನ್ನು ನಾಗರಿಕ ಹಿತರಕ್ಷಣಾ ವೇದಿಕೆ ಮತ್ತು ಮಾನವ ಬಂಧುತ್ವ ವೇದಿಕೆ ವತಿಯಿಂದ ಹಮ್ಮಿಕೊಳ್ಳಲಾಗಿದೆ ಎಂದು ಮಂಜು ದೊಡ್ಮನಿ ತಿಳಿಸಿದ್ದಾರೆ.

## ಇಂದು ಕುರಿ-ಮೇಕೆ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ಕುರಿ ಮತ್ತು ಮೇಕೆ ಸಾಕಾಣಿಕೆ ಕುರಿತು ತರಬೇತಿ ಇಂದು ಮತ್ತು ನಾಳೆ ದಾವಣಗೆರೆಯ ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದಲ್ಲಿ ನಡೆಯಲಿದೆ.ವಿವರಕ್ಕೆ ಸಂಪರ್ಕಿಸಿ: 08192-233787.

## ಭಜನಾ ಸ್ಪರ್ಧೆ : ನೋಂದಣಿಗೆ ಕರೆ

ದಾವಣಗೆರೆ, ಜ.5- ಶ್ರೀ ವೀರೇಶ್ವರ ಪುಣ್ಯಾಶ್ರಮದಲ್ಲಿ ಫೆಬ್ರವರಿ 2 ರಿಂದ ಮಾರ್ಚ್ 2 ರವರೆಗೆ ಒಂದು ತಿಂಗಳ ಕಾಲ ಹಮ್ಮಿಕೊಳ್ಳಲಾದ ರಾಜ್ಯಮಟ್ಟದ ಕನ್ನಡ ಸಮೂಹ ಭಜನಾ ಸ್ಪರ್ಧೆಯ ಹೆಸರು ನೋಂದಾಯಿಸುವ ದಿನಾಂಕವನ್ನು ಇದೇ ದಿನಾಂಕ 15 ರವರೆಗೆ ವಿಸ್ತರಿಸಲಾಗಿದೆ ಎಂದು ಸ್ಪರ್ಧೆಯ ಆಯೋಜಕರೂ, ಸಂಘಟನಾ ಕಾರ್ಯದರ್ಶಿಗಳಾದ ಎ. ಕೊಟ್ರಪ್ಪ ಕಿತ್ತೂರು ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 9480176601.

## ಬೈಕ್ ಡಿಕ್ಕಿ : ನೆರವಿಗೆ ತುರ್ತು ಪೊಲೀಸ್

ದಾವಣಗೆರೆ, ಜ.5- ಎರಡು ಬೈಕ್ ಗಳ ಮಧ್ಯೆ ಮುಖಾಮುಖಿ ಡಿಕ್ಕಿ ಸಂಭವಿಸಿದ್ದು, ಇಬ್ಬರು ಬೈಕ್ ಸವಾರರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಮಲ್ಲಶೆಟ್ಟಿಹಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿ 48 ರಲ್ಲಿ ಸಂಭವಿಸಿದೆ.

ಅಪಘಾತ ಸಂಭವಿಸಿರುವ ಬಗ್ಗೆ ಸ್ಥಳೀಯರು 112 ಪೊಲೀಸ್ ತುರ್ತು ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಕೂಡಲೇ ಸ್ಥಳಕ್ಕೆ ಬಂದ ಪೊಲೀಸ್ ಸಿಬ್ಬಂದಿ ಗಾಯಾಳುಗಳನ್ನು ರಕ್ಷಣೆ ಮಾಡಿದ್ದಾರೆ. ಅಲ್ಲದೇ, ಸ್ಥಳದಲ್ಲಿಯೇ ಅವರಿಗೆ ಪ್ರಥಮ ಚಿಕಿತ್ಸೆ ನೀಡಿದ್ದು, ಬಳಿಕ ಸ್ಥಳಕ್ಕೆ ಅಂಬ್ಯುಲೆನ್ಸ್ ಕರೆಸಿ ಗಾಯಾಳುಗಳನ್ನು ಜಿಲ್ಲಾಸ್ಪತ್ರೆಗೆ ಸಾಗಿಸಿದ್ದಾರೆ.

# ಮಾಸ್ಕ್ ಕಡ್ಡಾಯ, ಜನ ಸೇರದಂತೆ ನಿರ್ಬಂಧ

**(1ನೇ ಪುಟದಿಂದ)** ಸ್ಥಾಪಿಸಲಾಗುವುದು ಎಂದು ಹೇಳಿದರು.

ಶುಕ್ರವಾರ ರಾತ್ರಿ 8ರಿಂದ ಸೋಮವಾರ ಬೆಳಿಗ್ಗೆ 5ರವರೆಗೆ ವಾರಾಂತ್ಯದ ಕರ್ಫ್ಯೂ ಇರುತ್ತದೆ. ಈ ಅವಧಿಯಲ್ಲಿ ಆಹಾರ, ಹಣ್ಣು, ತರಕಾರಿ, ಮೀನು, ಮಾಂಸ, ಹಾಲು, ಮೇವು, ದಿನಸಿಯಂತಹ ಅಂಗಡಿಗಳ ಮೇಲೆ ನಿರ್ಬಂಧ ಇರುವುದಿಲ್ಲ. ಬೀದಿ ವ್ಯಾಪಾರಿಗಳಿಗೂ ಅವಕಾಶ ಇರುತ್ತದೆ. ಪಡಿತರ ಅಂಗಡಿಗಳೂ ಕಾರ್ಯ ನಿರ್ವಹಿಸುತ್ತವೆ. ಆದರೆ, ಹೋಟೆಲ್‌ಗಳು ವಾರಾಂತ್ಯದ ಕರ್ಫ್ಯೂ ವೇಳೆಯಲ್ಲಿ ಮನೆಗಳಿಗೆ ಪೂರೈಸಲು ಹಾಗೂ ಪಾರ್ಸೆಲ್ ಕೊಡಲು ಮಾತ್ರ ಅವಕಾಶ ಇರುತ್ತದೆ ಎಂದು ಬೀಳಗಿ ಸ್ಪಷ್ಟಪಡಿಸಿದ್ದಾರೆ.

ಕೆಲ ಜಿಲ್ಲೆಗಳಲ್ಲಿ ಪ್ರಕರಣಗಳು ಕೆಲವೇ ದಿನಗಳಲ್ಲಿ ಎರಡು - ಮೂರು ಪಟ್ಟು ಹೆಚ್ಚಾಗುತ್ತಿವೆ. ಈ ಹಿಂದಿನ ಅಲೆಗಳಲ್ಲಿ ದಾವಣಗೆರೆಗೆ ಕೊರೊನಾ ಪ್ರಕರಣಗಳು ತಡವಾಗಿ ಬಂದಿದ್ದವು. ಈ ಬಾರಿಯೂ ಸಹ ಅದೇ ರೀತಿ ಆಗಬಹುದು. ಹೀಗಾಗಿ ಜಿಲ್ಲೆಯಲ್ಲಿ ಪ್ರಕರಣಗಳು ಇಲ್ಲ ಎಂದು ಮೈ ಮರೆಯಬಾರದು ಎಂದು ಬೀಳಗಿ ತಿಳಿಸಿದರು.

### ಆಸ್ಪತ್ರೆಗಳನ್ನು ಸನ್ನದ್ಧವಾಗಿರಿಸಿದ್ದೇವೆ : ಡಿಸಿ

ಕೊರೊನಾ ಎದುರಿಸಲು ಆಸ್ಪತ್ರೆಗಳನ್ನು ಸನ್ನದ್ಧವಾಗಿರಿಸಿದ್ದೇವೆ. ಎಷ್ಟೇ ಪ್ರಕರಣಗಳು ಬಂದರೂ ಎದುರಿಸಲು ಸಿದ್ಧವಾಗಿದ್ದೇವೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದ್ದಾರೆ.

ಜಿಲ್ಲೆಯಲ್ಲಿ 3,000 ಬೆಡ್‌ಗಳು ಸಿದ್ಧವಾಗಿವೆ. ಆಕ್ಸಿಜನ್ ಘಟಕ, ವೆಂಟಿಲೇಟರ್, ಐಸಿಯು ಬೆಡ್‌ಗಳು ಸೇರಿದಂತೆ ಅಗತ್ಯ ಸೌಲಭ್ಯಗಳು ಹಾಗೂ ಮಾನವ ಸಂಪನ್ಮೂಲ ಕಲ್ಪಿಸಲಾಗಿದೆ ಎಂದವರು ತಿಳಿಸಿದ್ದಾರೆ.

ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಶೇ.75 ಹಾಗೂ ಖಾಸಗಿ ಆಸ್ಪತ್ರೆಗಳಿಂದ ಶೇ.50ರಷ್ಟು ಬೆಡ್‌ಗಳನ್ನು ಪಡೆಯಲು ಈಗಾಗಲೇ ಪತ್ರ ಬರೆಯಲಾಗಿದೆ ಎಂದವರು ಹೇಳಿದ್ದಾರೆ.

ಡಿ.ಹೆಚ್.ಓ. ನೇತೃತ್ವದಲ್ಲಿ ಐದು ತಂಡಗಳನ್ನು ಕೊರೊನಾ ಎದುರಿಸಲು ರೂಪಿಸಲಾಗಿದೆ. ಶನಿವಾರ ತುರ್ತು ಸಭೆ ನಡೆಸಿ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದವರು ಹೇಳಿದ್ದಾರೆ.

## ಮನೆಯಲ್ಲಿ ಪ್ರತ್ಯೇಕವಾಗಿರುವವರಿಗೆ ಕೋವಿಡ್ ಹೊಸ ಮಾರ್ಗಸೂಚಿ

ನವದೆಹಲಿ, ಜ. 5 - ಲಕ್ಷಣ ರಹಿತ, ಇಲ್ಲವೇ ಸೌಮ್ಯ ಲಕ್ಷಣಗಳೊಂದಿಗೆ ಮನೆಯಲ್ಲಿ ಪ್ರತ್ಯೇಕವಾಗಿರುವ ಕೊರೊನಾ ಸೋಂಕಿತರ ಮಾರ್ಗಸೂಚಿಯನ್ನು ಕೇಂದ್ರ ಸರ್ಕಾರ ಬದಲಿಸಿದ್ದು, ಪಾಸಿಟಿವ್ ಬಂದ ಏಳು ದಿನಗಳ ನಂತರ ಹಾಗೂ ಸತತ ಮೂರು ದಿನ ಜ್ವರ ಇರದೇ ಇದ್ದರೆ ಬಿಡುಗಡೆ ಎಂದು ಪರಿಗಣಿಸಬೇಕು ಎಂದು ತಿಳಿಸಿದೆ.

ಈ ಹಿಂದೆ ಬಿಡುಗಡೆ ಎಂದು ಪರಿಗಣಿಸಲು ಹತ್ತು ದಿನಗಳ ಗಡುವಿತ್ತು. ಬಿಡುಗಡೆ ಸಂದರ್ಭದಲ್ಲಿ ಮತ್ತೆ ಕೊರೊನಾ ಪರೀಕ್ಷೆ ನಡೆಸುವ ಅಗತ್ಯವಿಲ್ಲ ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ಜನರು ಸ್ವಯಂ ಚಿಕಿತ್ಸೆ, ರಕ್ತ ತಪಾಸಣೆ ಇಲ್ಲವೇ ಸಿ.ಟಿ. - ಸ್ಕ್ಯಾನ್ ರೀತಿಯ ಪರೀಕ್ಷೆಗಳಿಗೆ ಮುಂದಾಗಬಾರದು. ವೈದ್ಯರ ಸಲಹೆ ಪಡೆಯಬೇಕು ಎಂದು ಸರ್ಕಾರ ಹೇಳಿದೆ. ಲಘು ಲಕ್ಷಣಗಳಿರುವ ಸಂದರ್ಭದಲ್ಲಿ ಸ್ಟಿರಾಯ್ಡ್‌ಗಳನ್ನು ಬಳಸಬಾರದು. ಸ್ಟಿರಾಯ್ಡ್‌ಗಳ ಅತಿಯಾದ ಬಳಕೆಯಿಂದ ಸಮಸ್ಯೆಗಳಾಗುತ್ತವೆ ಎಂದು ತಿಳಿಸಲಾಗಿದೆ.

## ಲಸಿಕೆಯಲ್ಲಿ ಆಂಧ್ರ ಮುಂಚೂಣಿ

ನವದೆಹಲಿ, ಜ. 5 - 15 ರಿಂದ 17ರ ವಯೋ ಮಾನದವರಿಗೆ ಲಸಿಕೆ ನೀಡುವಲ್ಲಿ ಆಂಧ್ರಪ್ರದೇಶ ಮುಂಚೂಣಿಯಲ್ಲಿದೆ. ಈ ವಯೋಮಾನದ ಶೇ.39.8ರಷ್ಟು ಮಕ್ಕಳಿಗೆ ಎರಡು ದಿನಗಳಲ್ಲೇ ಲಸಿಕೆ ನೀಡಲಾಗಿದೆ.

ಹಿಮಾಚಲ ಪ್ರದೇಶ ಶೇ.37ರಷ್ಟು ಮತ್ತು ಗುಜರಾತ್ ಶೇ.30.9ರಷ್ಟು ಮಕ್ಕಳಿಗೆ ಲಸಿಕೆ ನೀಡಿದೆ. ಕಳೆದ ಜನವರಿ 3ರಿಂದ 15-18ರ ವಯೋಮಾನದವರಿಗೆ ಲಸಿಕೆ ನೀಡುವುದಕ್ಕೆ ಚಾಲನೆ ನೀಡಲಾಗಿದೆ. ಇದುವರೆಗೂ 85 ಲಕ್ಷ ಮಕ್ಕಳಿಗೆ ಮೊದಲ ಡೋಸ್ ಲಸಿಕೆ ನೀಡಲಾಗಿದೆ.

## ಪ್ಯಾರಸಿಟಮಾಲ್ ಅಗತ್ಯವಿಲ್ಲ

**(1ನೇ ಪುಟದಿಂದ)** ಲಸಿಕೆ ಪಡೆದ ಶೇ.10ರಿಂದ 20ರಷ್ಟು ಮಕ್ಕಳಲ್ಲಿ ಸಣ್ಣ ಪ್ರಮಾಣದ ಅಡ್ಡ ಪರಿಣಾಮಗಳು ಕಂಡು ಬಂದಿವೆ. ಇವು ಒಂದೆರಡು ದಿನಗಳಲ್ಲಿ ನಿವಾರಣೆಯಾಗುತ್ತವೆ. ಇದಕ್ಕಾಗಿ ಔಷಧಿ ನೀಡಬೇಕಿಲ್ಲ ಎಂದು ಕಂಪನಿ ತಿಳಿಸಿದೆ. ವೈದ್ಯರ ಜೊತೆ ಚರ್ಚಿಸಿದ ನಂತರವೇ ಚಿಕಿತ್ಸೆ ಪಡೆಯಬಹುದು ಎಂದು ಭಾರತ್ ಬಯೋಟೆಕ್ ತಿಳಿಸಿದೆ.

## ಶಿವಗಣಾರಾಧನೆ..!

**(1ನೇ ಪುಟದಿಂದ)** ಕೊಟ್ರಗೌಡ ಬಣಕಾರ, ಕೆ. ಮಹೇಶ್ ಶಿಕ್ಷಕರು, ಹೆಚ್. ದೇವರಾಜ್, ಎಸ್. ರಾಜು, ದಾವಣಗೆರೆ ಬಸವ ಬಳಗದ ಮಹಾದೇವಮ್ಮ ಮಲ್ಲಿಕಾರ್ಜುನಪ್ಪ, ತ್ಯಾಪೇರ ಕೆಂಚಪ್ಪ, ಹರಪನ ಹಳ್ಳಿ ಶಂಭಣ್ಣ, ಬೆಣ್ಣೆ ಚೆನ್ನಪ್ಪ, ಮುದ್ದಿ ನಿಂಗಪ್ಪರ ಕೆಂಚಣ್ಣ, ದಾವ ಣಗೆರೆಯ ಪ್ರಕಾಶ್ ಹೊಸಮನಿ, ಶಿಕ್ಷಕರಾದ ಚನ್ನಬಸಪ್ಪ ಪೂಜಾರ, ಸಂತೋಷ ಕುಮಾರ್ ಮತ್ತಿತರರು ಭಾಗವಹಿಸಿದ್ದರು.

# ಕೊರೊನಾ ತಡೆಯಲು ಚುರುಕಾಗಿ



**(1ನೇ ಪುಟದಿಂದ)** ಕಸದ ಆಟೋದಲ್ಲಿ ಕೊರೊನಾ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಮನೆ ಮನೆಗಳಿಗೆ ಪ್ರಚಾರ ಕಾರ್ಯ ಮಾಡಲಾಗುತ್ತಿದೆ. ಗುರುವಾರ ಬೆಳಗ್ಗೆ ನಗರದ ತರಕಾರಿ, ಹಣ್ಣು, ಲಾಡ್ಜ್, ಮಹಲ್, ಕಲ್ಯಾಣ ಮಂಟಪ, ಚಿಕನ್, ಮಟನ್, ಸೇರಿದಂತೆ ಹಲವು ವ್ಯಾಪಾರಸ್ಥರ ಸಭೆಯನ್ನು ಏರ್ಪಡಿಸಿ ಅವರಿಗೆ ಸರ್ಕಾರದ ಕಾರ್ಯಸೂಚಿಯನ್ನು ಕಡ್ಡಾಯವಾಗಿ ಪಾಲನೆ ಮಾಡುವುದಕ್ಕೆ ಸಭೆಯನ್ನು ಮಾಡುವುದಾಗಿ ಹೇಳಿದರು.

ತಾಲ್ಲೂಕು ಪಂಚಾಯ್ತಿ ಇ.ಓ. ಗಂಗಾಧರನ್ ಮಾತನಾಡಿ, ಗ್ರಾಮೀಣ ಪ್ರದೇಶಗಳಲ್ಲಿ ಕೊರೊನ ರೋಗವು ಹೆಚ್ಚಾಗಿ ಹರಡದಂತೆ ತಡೆಯಲು ಪಿಡಿಓ ಅವರಿಗೆ ಮತ್ತು ಗ್ರಾ.ಪಂ. ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಎಲ್ಲಾ ರೀತಿಯ ಮಾರ್ಗದರ್ಶನ ನೀಡಲಾಗಿದೆ. ಹೆಚ್ಚಿನ ಪ್ರಮಾಣದಲ್ಲಿ ಜನರು ಸೇರಿದಂತೆ ಗ್ರಾ.ಪಂ ವತಿಯಿಂದ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡಲಾಗುತ್ತದೆ ಎಂದು ಹೇಳಿದರು.

ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್ ಮಾತನಾಡಿ, ಪ್ರತಿನಿತ್ಯವೂ ಆಶಾ ಕಾರ್ಯಕರ್ತರೊಂದಿಗೆ ತಪಾಸಣೆ ಮಾಡಲಾಗುತ್ತದೆ. ತಾಲ್ಲೂಕಿನ ಹೈಸ್ಕೂಲ್ ಮತ್ತು ಪಿ.ಯು.ಸಿ ಓದುವ 15 ರಿಂದ 18 ವರ್ಷದ ವಿದ್ಯಾರ್ಥಿಗಳಿಗೆ ಲಸಿಕೆಯನ್ನು ಈಗಾಗಲೇ ಶೇ. 64 ರಷ್ಟು ಹಾಕಲಾಗಿದೆ ಎಂದು ಹೇಳಿದರು.

ಸಿಪಿಐ ಸತೀಶ್ ಕುಮಾರ್ ಮಾತನಾಡಿ, ಕೊರೊನಾ ಮಾರ್ಗಸೂಚಿ ಕುರಿತು ಜಾಗೃತಿ ಮೂಡಿಸಲಾಗುವುದು. ಮುಂದಿನ ದಿನಗಳಲ್ಲಿ ದಂಡವನ್ನು ಹಾಕುವುದಕ್ಕೆ ಪ್ರಾರಂಭ ಮಾಡಲಾಗುತ್ತದೆ ಎಂದು ಹೇಳಿದರು.

ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಹನುಮಾನಾಯ್ಕ್ ಮಾತನಾಡಿ, ಕೊರೊನ ನಿಯಂತ್ರಣ ಸಾಧಿಸಲು ಬೇಕಾಗುವ ಔಷಧೀಯ ಸೌಲಭ್ಯಗಳನ್ನು ಸಿದ್ದತೆ ಮಾಡಿಕೊಳ್ಳಲಾಗಿದೆ. ಸಿಬ್ಬಂದಿಗಳ ಕೊರತೆ ತಡೆಯಲು ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳಾದ ಕೃಷಿ ಇಲಾಖೆಯ ನಾರನಗೌಡ, ಅಬಕಾರಿ ಇಲಾಖೆಯ ಶೀಲಾ, ತೋಟಗಾರಿಕೆ ಇಲಾಖೆಯ ರೇಖಾ, ಸಿಡಿಪಿಓ ನಿರ್ಮಲ, ಎಪಿಎಂಸಿ ವಿದ್ಯಾ, ಲೋಕೋಪಯೋಗಿ ಇಲಾಖೆಯ ಶಿವಮೂರ್ತಿ, ಸಮಾಜ ಕಲ್ಯಾಣ ಇಲಾಖೆಯ ನಾಸೀರ್ ಉದ್ದೀನ್ , ಹಿಂದುಳಿದ ವರ್ಗಗಳ ಇಲಾಖೆಯ ಪರವಿನ್ ಬಾನು ಮತ್ತಿತರರು ಹಾಜರಿದ್ದರು.

# ನಿಗದಿಯಂತೆ ಮೇಕೆದಾಟು ಪಾದಯಾತ್ರೆ

**(1ನೇ ಪುಟದಿಂದ)** ಹೊರತು, ಬಿಜೆಪಿಗೆ ಅನ್ವಯಿಸುವುದಿಲ್ಲವೇ? ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪಂಜಾಬ್‌ಗೆ ಹೋಗಿಲ್ಲವೇ? ಮುಖ್ಯಮಂತ್ರಿ ಅವರು ಇಂದು ನಾಗಮಂಗಲಕ್ಕೆ ಹೋಗಿಲ್ಲವೇ? ಇದು ಅವರಿಗೆ ಅನ್ವಯವಾಗುವುದಿಲ್ಲವೇ ? ಸರ್ಕಾರ ನಡೆಸುತ್ತಿರುವ ಅವರಿಗೆ ಪ್ರತಿಪಕ್ಷಗಳಿಗಿಂತ ಹೆಚ್ಚು ಜವಾಬ್ದಾರಿ ಇದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಆಡಳಿತಾರೂಢ ಪಕ್ಷ ತಾನೇ ಸರ್ಕಾರದ ಸುತ್ತೋಲೆ ಉಲ್ಲಂಘಿಸುತ್ತಿದೆ. ಆದರೆ, ಕಾಂಗ್ರೆಸ್ ಸುತ್ತೋಲೆ ಪಾಲಿಸಬೇಕು ಎಂದು ಬಯಸುತ್ತಿದೆ. ನಾವು ಕಾನೂನು ಗೌರವಿಸುತ್ತೇವೆ. ಎಲ್ಲ ಮುನ್ನೆಚ್ಚರಿಕೆಗಳೊಂದಿಗೆ ಪಾದಯಾತ್ರೆ ಕೈಗೊಳ್ಳುತ್ತೇವೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಅಧಿಕಾರಿಗಳು ತಮ್ಮನ್ನು ತಡೆಯಲು ಬಂದರೆ ಯಾವುದೇ ಪರಿಣಾಮವಾದರೂ ಎದುರಿಸುತ್ತೇವೆ. ನಿಷೇಧಾಜ್ಞೆ ಹೇರಿದರೆ, ನಾನು ಶಿವಕುಮಾರ್ ಹಾಗೂ ಇನ್ನಿಬ್ಬರು ನಾಯಕರು ಪಾದಯಾತ್ರೆ ಮಾಡುತ್ತೇವೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ರಾಜ್ಯದ ಯಾವೊಬ್ಬ ವ್ಯಕ್ತಿಗೂ ಕೊರೊನಾ ಬರಬಾರದು ಎಂಬುದು ನಮ್ಮ ಆಶಯವೂ ಹೌದು. ಆದರೆ, ಬಿಜೆಪಿ ಸರ್ಕಾರ ನಿಬಂಧನೆಗಳನ್ನು ಹೇರಿರುವ ಹಿಂದೆ ಬೇರೆಯೇ ಉದ್ದೇಶ ಇದೆ. ಅವರ ಈ ಷಡ್ಯಂತ್ರವನ್ನು ಬಯಲು ಮಾಡುತ್ತೇವೆ ಎಂದವರು ತಿಳಿಸಿದ್ದಾರೆ.

ಕೊರೊನಾ ಮೂರನೇ ಅಲೆಯ ನಿರೀಕ್ಷೆ ಇದ್ದರೂ ಸರಿಯಾದ ತಪಾಸಣೆ ನಡೆಸದೆ, ಅಂತರರಾಷ್ಟ್ರೀಯ ವಿಮಾನ ಸಂಚಾರ ತಡೆಯದೆ, ಮಾಸ್ಕ್ ಬಳಕೆ ಕಟ್ಟುನಿಟ್ಟು ಮಾಡದೆ ಈಗ ವಿರೋಧ ಪಕ್ಷವೊಂದು ತನ್ನ ಜವಾಬ್ದಾರಿ ನಿರ್ವಹಿಸಲು ಹೊರಟಾಗ ದುರುದ್ದೇಶದಿಂದ ನಿರ್ಬಂಧಗಳನ್ನು ಹೇರಿರುವುದು ಖಂಡನೀಯ ಎಂದವರು ತರಾಟೆಗೆ ತೆಗೆದುಕೊಂಡಿದ್ದಾರೆ.

## ಹರಿಹರ ತಾ.ನಲ್ಲಿ ಸಂಸದರ ಪ್ರವಾಸ

ಹರಿಹರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೊಂಡಜ್ಜಿ, ಚಿಕ್ಕ ಬಿದರಿ, ಕಮಲಾಪುರ, ಬೆಳ್ಳೂಡಿ, ಹರಳ ಹಳ್ಳಿ, ಸತ್ಯನಾರಾಯಣ ಕ್ಯಾಂಪ್, ಶ್ರೀನಿವಾಸ ಕ್ಯಾಂಪ್ ಗ್ರಾಮಗಳಲ್ಲಿ ಇಂದು ಮಧ್ಯಾಹ್ನ 12 ರಿಂದ ಸಂಜೆ 5 ರವರೆಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆಯನ್ನು ಸಂಸದ ಜಿ.ಎಂ. ಸಿದ್ದೇಶ್ವರ ನಡೆಸಿಕೊಡಲಿದ್ದಾರೆ.

## CHANGE OF NAME

I, Mohammed Asif Shaik s/o Shaik Mohiuddin Abdul Munaf Residing at Devaraj Urs Layout, 11th cross "B" Block, #337, Davangere has, Changed my name to Mohammed Asif Shaik. In my educational record name is mentioned as Abdul Asif, my correct name is Mohammed Asif Shaik and Date of Birth in my passport is 19.08.1967 it should be changed to 8.08.1966 in my Passport I Changed my name in the affidavit on 05.01.2022. In future all my records and transaction will be in my new name.


## ಹೃದಯಪೂರ್ವಕ ಅಭಿನಂದನೆಗಳು






ದಿನಾಂಕ : 27.12.2021 ರಂದು ನಡೆದ ಮಲೇಬೆನ್ನೂರು ಪುರಸಭೆ ಚುನಾವಣೆಯಲ್ಲಿ 12 ಜನ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಪುರಸಭೆಯಲ್ಲಿ ಅಧಿಕಾರದ ಚುಕ್ಕಾಣಿ ನೀಡಿದ ಮಲೇಬೆನ್ನೂರು ಪಟ್ಟಣದ ಸಮಸ್ತ ಜನತೆಗೆ ಮತ್ತು ಅಭ್ಯರ್ಥಿಗಳ ಆಯ್ಕೆಗೆ ಶ್ರಮಿಸಿದ ಕಾಂಗ್ರೆಸ್ ಪಕ್ಷದ ಎಲ್ಲಾ ಮುಖಂಡರಿಗೆ, ಕಾರ್ಯಕರ್ತರಿಗೆ, ಅಭಿಮಾನಿಗಳಿಗೆ ನನ್ನ ಹೃದಯಪೂರ್ವಕ ಕೃತಜ್ಞತೆಗಳು ಮತ್ತು ಪುರಸಭೆಗೆ ಆಯ್ಕೆಯಾದ ನೂತನ ಸದಸ್ಯರಿಗೆ ಹಾರ್ದಿಕ ಅಭಿನಂದನೆಗಳು.



**ಪಿ.ಹೆಚ್. ಶಿವಕುಮಾರ್**
ಯುವ ಕಾಂಗ್ರೆಸ್ ಮುಖಂಡರು, ಮಲೇಬೆನ್ನೂರು.


## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

### ಸ್ಥಿರ ಸೊತ್ತುಗಳ ಬಹಿರಂಗ ಹರಾಜು ಪ್ರಕಟಣೆ

ಈ ಕೆಳಕಂಡ ಸುಸ್ತಿದಾರರ ಮೇಲೆ ಬ್ಯಾಂಕ್ ದಾವಾ ಕ್ರಮ ಜರುಗಿಸಿ ಡಿಕ್ರಿ ಹುಕುಂ ಪಡೆದು, ಸದರಿ ಸಾಲದ ವಸೂಲಾತಿಗಾಗಿ ಸ್ಥಿರಾಸ್ತಿ ಸೊತ್ತುಗಳನ್ನು ಈ ಕೆಳಗೆ ನಮೂದಿಸಿರುವ ಸ್ಥಳ ಮತ್ತು ವೇಳೆಯಲ್ಲಿ ಬಹಿರಂಗ ಹರಾಜು ಮಾಡಲಾಗುತ್ತೆ. ಹರಾಜಿನಲ್ಲಿ ಸ್ಥಿರ ಸೊತ್ತುಗಳನ್ನು ಕೊಳ್ಳಲು ಇಚ್ಛಿವುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಅತ್ಯಧಿಕ ಸವಾಲ್ ಮಾಡಿ ಈ ಕೆಳಕಂಡ ಸೊತ್ತುಗಳನ್ನು ಪಡೆಯಬಹುದು.

| ಕ್ರ. ಸಂ. | ಬಾಕಿದಾರರ ಹೆಸರು ಮತ್ತು ಇ.ಪಿ. ಸಂಖ್ಯೆ | ಬಾಕಿ ಮೊತ್ತ (ಅಸಲು+ಬಡ್ಡಿ+ ಇತರೆ ಖರ್ಚು) (03–12–2021 ರ ವರೆಗೆ) | ಬಹಿರಂಗ ಹರಾಜು ಮಾಡಲ್ಪಡುವ ಸ್ಥಿರ ಸೊತ್ತಿನ ವಿವರ | ಬಹಿರಂಗ ಹರಾಜು ನಡೆಯುವ ಸ್ಥಳ, ದಿನಾಂಕ ಮತ್ತು ಸಮಯ | ಪಾವತಿಸಬೇಕಾದ ಮುಂಗಡ ಠೇವಣಿ |
|---|---|---|---|---|---|
| 1 | ಶ್ರೀಮತಿ ಸುನಂದ ಗಿರೀಶ್ ಕೋಂ ಪಿ. ಗಿರೀಶ್ ಇ.ಪಿ. ಸಂ.3/2021–22 | 9,51,24,552–00+ಇತರೆ ಖರ್ಚು | ದಾವಣಗೆರೆ ನಗರ, 30ನೇ ವಾರ್ಡ್, ಚಿಗಟೇರಿ ಲೇ ಔಟ್, ಶಾಬನೂರು ರಿ.ಸರ್ವೆ ನಂ.43 ರಲ್ಲಿರುವ ನಿವೇಶನ ಸಂಖ್ಯೆ 189 ಮತ್ತು 190, ಡೋರ್ ನಂ.2602/189 ಮತ್ತು 2762/190 ಇದರಲ್ಲಿರುವ ಬಹುಮಹಡಿ ಕಟ್ಟಡ. ನಿವೇಶನ ಸಂಖ್ಯೆ 189, 40+43/2 X 60 ಅಡಿ ನಿವೇಶನ ಸಂಖ್ಯೆ 190, 43+48/2 X 60 ಅಡಿ ಎರಡು ನಿವೇಶನಗಳ ಒಟ್ಟು ಅಳತೆ 5220 ಚ.ಅಡಿಗಳು. | ದಿನಾಂಕ 17–01–2022ನೇ ಸೋಮವಾರ ಮಧ್ಯಾಹ್ನ 12–00 ಗಂಟೆಗೆ ಹರಾಜಿಗೆ ಒಳಪಟ್ಟ ಸೊತ್ತಿನ ಮುಂಭಾಗದಲ್ಲಿ. | 1,00,000=00 |

#### -: ಹರಾಜಿನ ಷರತ್ತುಗಳು :-

(1) ಹರಾಜಿನಲ್ಲಿ ಭಾಗವಹಿಸುವವರು ಹರಾಜು ಸ್ಥಳದಲ್ಲಿ ಮುಂಗಡ ಠೇವಣಿಯನ್ನು ಡಿ.ಡಿ. ಮುಖಾಂತರ ಪಾವತಿಸಬೇಕು (ಪ್ರಧಾನ ವ್ಯವಸ್ಥಾಪಕರು ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿ., ಇವರ ಹೆಸರಿಗೆ) ಇದನ್ನು ಹರಾಜಿನ ಸಮಯಕ್ಕೆ ಅರ್ಧ ಗಂಟೆಗೆ ಮುಂಚಿತವಾಗಿ ಪಾವತಿಸಿ ತಮ್ಮ ವೈಯಕ್ತಿಕ ಮಾಹಿತಿ (ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ಪ್ರತಿಯೊಂದಿಗೆ) ಸಲ್ಲಿಸಿ ಬಿಡ್ಡುದಾರರೆಂದು ನೋಂದಾಯಿಸಿಕೊಳ್ಳಬೇಕು. (2) ಸವಾಲಿನಲ್ಲಿ ಭಾಗವಹಿಸಲು ಇಚ್ಚಿಸುವವರು ಸದರಿ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು. (3) ಹರಾಜಿಗೆ ಮುನ್ನ ಬ್ಯಾಂಕಿಗೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. (4) ನಿಗದಿಪಡಿಸಿದ ಸಮಯದ ನಂತರ ಬಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ. (5) ಅಧಿಕೃತ ಸವಾಲ್ ಮಾಡಿ ಸ್ಥಿರಾಸ್ತಿಯನ್ನು ಕೊಳ್ಳುವವರು ಮಾರಾಟಾಧಿಕಾರಿಯವರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡ 15ರಷ್ಟು ಮೊತ್ತವನ್ನು ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್‌ಪೇಪರ್ ಮೊಬಲಗನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. (6) ಹರಾಜಿಗಿಟ್ಟ ಸ್ಥಿರ ಸ್ವತ್ತಿನ ವಿವರಣೆ ಅಂದಾಜು ವಿಸ್ತೀರ್ಣದ ವಿಷಯದಲ್ಲಿ ವ್ಯತ್ಯಾಸ ಉಂಟಾದರೆ ಬ್ಯಾಂಕ್ ಜವಾಬ್ದಾರರಾಗಿರುವುದಿಲ್ಲ. (7) ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. (8) ಒಂದು ವೇಳೆ ಸುಸ್ತಿ ಸಾಲಗಾರರು 45 ದಿನಗಳೊಳಗಾಗಿ ಇತರೆ ಎಲ್ಲಾ ಖರ್ಚುಗಳೊಂದಿಗೆ ಸಂಪೂರ್ಣ ಹಣ ಪಾವತಿ ಮಾಡಿದಾಗ ಹರಾಜಿನಲ್ಲಿ ಒಪ್ಪಿಕೊಂಡ ಖರೀದಿದಾರರಿಗೆ ಶೇಕಡ 5ರಂತೆ ಮಾರಾಟ ಮಾಡಿದ ಹಣಕ್ಕೆ ಸಮಾಧಾನಾರ್ಥವಾಗಿ ಪರಿಹಾರವನ್ನು ಕರ್ನಾಟಕ ಸಹಕಾರಿ ನಿಯಮ 60, ನಿಯಮ 38(4)(1)ರ ಪ್ರಕಾರ ಸುಸ್ತಿಸಾಲಗಾರರಿಂದ ಕೊಡಿಸಲಾಗುವುದು. (9) ಮೇಲೆ ಕಾಣಿಸಿದಂತೆ ಸ್ಥಿರಾಸ್ತಿ ಹರಾಜಿನ ಹಣವನ್ನು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಕಟ್ಟಲು ತಪ್ಪಿದಲ್ಲಿ ಹರಾಜನ್ನು ರದ್ದುಪಡಿಸಿ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಬಿಡ್ಡುದಾರರಿಗೆ ಇದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. (10) ಎಲ್ಲಾ ವಿಧವಾದ ಸ್ಟಾಂಪ್ ಡ್ಯೂಟಿ, ತೆರಿಗೆ, ಕಾನೂನು ಖರ್ಚು, ರಿಜಿಸ್ಟ್ರೇಷನ್ ಫೀ, ಬಾಕಿ ಇರುವ ವಿದ್ಯುತ್ ಬಿಲ್, ದೂರವಾಣಿ ಬಿಲ್, ಕಂದಾಯ ಮತ್ತು ನೀರಿನ ಕಂದಾಯ, ಇತರೆ ಖರ್ಚುಗಳನ್ನು ಸಹ ಖರೀದಿದಾರರೇ ಭರಿಸತಕ್ಕದ್ದು. (11) ಸ್ಥಿರಾಸ್ತಿಯು ಹರಾಜು ನಡೆಯುವ ದಿನ ಯಾವ ರೀತಿ ಇರುತ್ತದೆಯೋ ಮತ್ತು ಹೇಗಿರುತ್ತದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (12) **ಯಾವುದೇ ಕಾರಣ ನೀಡದೇ ಹರಾಜನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾರಾಟಾಧಿಕಾರಿಗಳ ಅಧೀನಕ್ಕೆ ಒಳಪಟ್ಟಿರುತ್ತದೆ.** (13) ಮೇಲ್ಕಾಣಿಸಿದ ಸ್ಥಿರಾಸ್ಥಿಯನ್ನು ಪರಿಶೀಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಮಾರಾಟಾಧಿಕಾರಿ/ಪ್ರಧಾನ ವ್ಯವಸ್ಥಾಪಕರನ್ನು ಈ ಜಾಹೀರಾತು ಬಂದ ದಿನಾಂಕದಿಂದ ಹರಾಜಿನ ದಿನಾಂಕದವರೆಗೆ ಬೆಳಿಗ್ಗೆ 11–00 ಘಂಟೆಯಿಂದ ಸಂಜೆ 5–00 ಘಂಟೆಯೊಳಗೆ ಸಂಪರ್ಕಿಸಿ ಪರಿಶೀಲಿಸಬಹುದು. (14) ಯಾವುದೇ ತಕರಾರಿದ್ದಲ್ಲಿ ಸಹಕಾರ ಸಂಘಗಳ ಕಾಯಿದೆ, ನಿಯಮಗಳ ಪ್ರಕಾರ ಇತ್ಯರ್ಥಗೊಳಿಸಲಾಗುವುದು.

ದಿನಾಂಕ : 05–01–2022
ಸ್ಥಳ : ದಾವಣಗೆರೆ

ಸಹಿ/–
**ಪ್ರಧಾನ ವ್ಯವಸ್ಥಾಪಕರು**

ಸಹಿ/– **ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿ,**
ದಾವಣಗೆರೆ ಇವರ ಆದೇಶದ ಮೇರೆಗೆ
ಮಾರಾಟಾಧಿಕಾರಿಗಳು (ನಿ.441) ಬಾಪೂಜಿ ಕೋ ಆಪರೇಟಿವ್ ಬ್ಯಾಂಕ್ ಲಿ.,ದಾವಣಗೆರೆ.

# ನಗರದಲ್ಲಿ ನಿವೃತ್ತ ಯೋಧರಿಗೆ ಅದ್ಧೂರಿ ಸ್ವಾಗತ

## ಭಾರತೀಯ ಸೈನ್ಯದಲ್ಲಿ ಸೇವೆ ಸಲ್ಲಿಸಿ ತವರಿಗೆ ಮರಳಿದ ಯೋಧರಾದ ನಾಗರಾಜ್, ರಾಘುವೇಂದ್ರ

ದಾವಣಗೆರೆ, ಜ. 5- ಭಾರತೀಯ ಸೈನ್ಯದಲ್ಲಿ 27 ವರ್ಷ ಸೇವೆ ಸಲ್ಲಿಸಿ ನಿವೃತ್ತರಾದ ಯೋಧ ನಾಗರಾಜ ಶೆಟ್ಟಿ ಹಾಗೂ 21 ವರ್ಷ ಸೇವೆ ಸಲ್ಲಿಸಿ ನಿವೃತ್ತರಾದ ಯೋಧ ಅರಸೀಕೆರೆಯ ರಾಘುವೇಂದ್ರ ಅವರುಗಳನ್ನು ನಗರದ ರೈಲ್ವೇ ನಿಲ್ದಾಣದಲ್ಲಿ ಇಂದು ಅದ್ಧೂರಿಯಾಗಿ ಸ್ವಾಗತಿಸಲಾಯಿತು.



ರೈಲ್ವೇ ನಿಲ್ದಾಣದಿಂದ ತೆರೆದ ವಾಹನದಲ್ಲಿ ಯೋಧರನ್ನು ಮೆರವಣಿಗೆ ಮೂಲಕ ಕರೆ ತರಲಾಯಿತು. ಈ ವೇಳೆ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಯೋಧರ ಬಂಧುಗಳು ಹಾಗೂ ಸ್ನೇಹಿತರೊಂದಿಗೆ ಹಾಡಿಗೆ ಹೆಜ್ಜೆ ಹಾಕಿದರು.

ಯೋಧರನ್ನು ಸ್ವಾಗತಿಸಿ ಮಾತನಾಡಿದ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ತಮ್ಮ ವೈಯಕ್ತಿಕವಾದ ಅಮೂಲ್ಯ ದಿನಗಳನ್ನು ಭಾರತ ಮಾತೆಗೆ ಅರ್ಪಿಸಿ, ದೇಶದ ಸೇವೆಗೆ ಮುಡಿ ಪಾಗಿಟ್ಟು ಹಿಂತಿರುಗಿದ ಸೈನಿಕರನ್ನು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಹೇಳಿದರು.

ನಮ್ಮ ಹಿತಕ್ಕಾಗಿ ಸೈನ್ಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ನಮ್ಮ ಸೈನಿಕರ ಮುಂದಿನ ಜೀವನ ಸುಖದಾಯಕವಾಗಿರಲಿ. ಅವರ ಕನಸುಗಳು ಈಡೇರಲಿ ಎಂದು ಆಶಿಸಿದ ವೀರೇಶ್, ಅವರೊಟ್ಟಿಗೆ ಇದ್ದು, ಅವರನ್ನು ಬೆಂಬಲಿಸೋಣ ಎಂದು ಹೇಳಿದರು.

ಡಿವೈಎಸ್ಪಿ ನರಸಿಂಹ ತಾಮ್ರಧ್ವಜ ಮಾತನಾಡಿ, ನಾವು ಸೈನಿಕರಿಗೆ ಬೆಂಬಲಿಸಿದಷ್ಟೂ ನಮ್ಮ ದೇಶದ ಸೈನ್ಯ ಬಲಿಷ್ಠವಾಗುತ್ತದೆ. ಗಡಿಗಳು ರಕ್ಷಿಸಲ್ಪಡುತ್ತವೆ. ಆಗ ನಾವೆಲ್ಲರೂ ಇಲ್ಲಿ ನೆಮ್ಮದಿಯಿಂದ ಕೆಲಸ ಮಾಡಬಹುದು. ಆದ್ದರಿಂದ ಪ್ರತಿ ಪ್ರಜೆಯೂ ಸೈನಿಕರನ್ನು ಬೆಂಬಲಿಸಬೇಕು, ಗೌರವಿಸಬೇಕು ಎಂದು ಕರೆ ನೀಡಿದರು.

ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಷಾ ಅವರು ಲಡಾಕ್‌ನಲ್ಲಿ ದೀಪಾವಳಿ ಆಚರಿಸುವ ಮೂಲಕ ಸೈನಿಕರಲ್ಲಿ ಆತ್ಮವಿಶ್ವಾಸ ತುಂಬಿದ್ದಾರೆ. ಸೈನಿಕರು ಹೊರಗಿನ ಶತ್ರುಗಳಿಂದ ದೇಶವನ್ನು ರಕ್ಷಿಸಿದರೆ. ದೇಶದೊಳಗಿನ ಶತ್ರುಗಳನ್ನು ಪೊಲೀಸರು ಸೆದೆಬಡಿಯಲು ಸಹಕಾರಿಯಾಗುತ್ತದೆ. ಜೈ ಜವಾನ್, ಜೈ ಕಿಸಾನ್ ಎಂದು ನಾವು ಸೈನಿಕರ ಬೆಂಬಲಕ್ಕೆ ನಿಲ್ಲೋಣ ಎಂದರು.

ನಿವೃತ್ತ ಯೋಧ ನಾಗರಾಜ ಶೆಟ್ಟಿ ಮಾತನಾಡಿ, ನಮ್ಮ ದೇಶಕ್ಕಾಗಿ ಮಾಡಿದ ಸೇವೆ ನಮಗೆ ತೃಪ್ತಿ ತಂದಿದೆ. ನಮಗೆ ಈ ಸನ್ಮಾನಗಳು ಬೇಡ, ಆದರೆ ಇದು ಯುವ ಜನತೆಗೆ ಪ್ರೇರಣೆಯಾಗಲಿ. ಪ್ರತಿಯೊಬ್ಬರೂ ದೇಶ ಸೇವೆಗೆ ಮುಂದಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಎಂ.ನಾಗರಾಜ್, ಎಂ.ನಾರಾಯಣ ಸ್ವಾಮಿ, ವಾರ್ತಾ ಇಲಾಖೆಯ ಬಿ.ಎಸ್.ಬಸವರಾಜ, ಶ್ರೀಧರ್, ಯುವ ಬ್ರಿಗೇಡ್ ಕಾರ್ಯಕರ್ತ ಪವನ್ ಪ್ರೇರಣ, ಜಿ.ಬಿ.ಸುರೇಶ್, ಸತೀಶ್, ಧನರಾಜ್, ರಮೇಶ್, ಮಂಜುನಾಥ್, ಅಮೃತ, ಹನುಮಂತಪ್ಪ, ಶಿವಕುಮಾರ್, ಪರಶುರಾಮ, ಗಿರೀಶ್, ಶಂಕರ್ ಗಣೇಶ್, ಹರೀಶ್ ಪವಾರ್, ಯೋಗೀಶ್, ರಾಜು, ಶಿವು ಸೇರಿದಂತೆ ನೀಲಮ್ಮನ ತೋಟದ ಚಾಮುಂಡೇಶ್ವರಿ ಕಬಡ್ಡಿ ಕ್ರೀಡಾ ಸಮಿತಿ, ವಂದೇ ಮಾತರಂ ಕ್ರೀಡಾ ಸಮಿತಿ, ಜಿಲ್ಲಾ ಸರ್ಕಾರಿ ನೌಕರರ ಕಬಡ್ಡಿ ಕ್ರೀಡಾ ಸಮಿತಿ, ಮಾಜಿ ಸೈನಿಕರ ಸಂಘ, ಜಿಲ್ಲಾ ಪ್ಯಾರಾ ಮಿಲಿಟರಿ ಯೋಧರ ಸಂಘ, ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆ ಪದಾಧಿಕಾರಿಗಳು, ಯೋಧರ ಸ್ನೇಹಿತರು, ಬಂಧುಗಳು ಪಾಲ್ಗೊಂಡಿದ್ದರು.

# ಕೋವಿಡ್ ನಿಯಮ ಉಲ್ಲಂಘನೆ ವಿರುದ್ಧ ಕಠಿಣ ಕಾನೂನು ಕ್ರಮ



## ಹರಪನಹಳ್ಳಿ ಉಪವಿಭಾಗಾಧಿಕಾರಿ ಹೆಚ್.ಜಿ.ಚಂದ್ರಶೇಖರಯ್ಯ

ಹರಪನಹಳ್ಳಿ, ಜ.5 - ಕೋವಿಡ್ ರೂಪಾಂತರಿ ಓಮಿಕ್ರಾನ್ ಸೋಂಕು ಹರಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಜಾರಿಗೊಳಿಸಿರುವ ನಿಯಮಗಳನ್ನು ಕಟ್ಟುನಿಟ್ಟಾಗಿ ಪರಿಪಾಲಿಸುವ ಮೂಲಕ ವೈರಸ್ ತಡೆಗಟ್ಟುವಲ್ಲಿ ಸಹಕರಿಸಬೇಕು ಎಂದು ಉಪವಿಭಾಗಾಧಿಕಾರಿ ಹೆಚ್.ಜಿ.ಚಂದ್ರಶೇಖರಯ್ಯ ಹೇಳಿದರು.

ಪಟ್ಟಣದ ಮಿನಿ ವಿಧಾನಸೌಧದ ಸಭಾಂಗಣದಲ್ಲಿ ಇಂದು ನಡೆದ ಕೋವಿಡ್- 19ರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸದೇ ಸಂಚರಿಸಬಾರದು. ಜೊತೆಗೆ, ಸಾಮಾಜಿಕ ಅಂತರವನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಸೇರಿದಂತೆ ಎಲ್ಲಾ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸಬೇಕು. ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿದರೆ, ಅಂತಹವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮಾರುಕಟ್ಟೆ, ಸಂತೆ, ಅಂಗಡಿ ಸೇರಿದಂತೆ ಎಲ್ಲಾ ವ್ಯಾಪಾರ ವಹಿವಾಟು ನಡೆಯುವ ಸ್ಥಳಗಳಲ್ಲಿ ಸಾಮಾಜಿಕ ಅಂತರ ಕಾಪಾಡುವ ಹಿನ್ನೆಲೆಯಲ್ಲಿ ಪಟ್ಟಣ ವ್ಯಾಪ್ತಿಯಲ್ಲಿ ಪುರಸಭೆ ಸಿಬ್ಬಂದಿ ಬಾಕ್ಸ್ ನಿರ್ಮಿಸುವಂತೆ ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್ ಅವರಿಗೆ ಹಾಗೂ ಗ್ರಾಮೀಣ ಪ್ರದೇಶಗಳ ವ್ಯಾಪಾರ, ವಹಿವಾಟು ಪ್ರದೇಶಗಳಲ್ಲಿ ಆಯಾ ಗ್ರಾಮ ಪಂಚಾಯ್ತಿ ಸಿಬ್ಬಂದಿ ಕೂಡಲೇ ಕ್ರಮ ವಹಿಸಲು ಸೂಚಿಸುವಂತೆ ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್ ಅವರಿಗೆ ಉಪವಿಭಾಗಾಧಿಕಾರಿ ಹೆಚ್.ಜಿ.ಚಂದ್ರಶೇಖರಯ್ಯ ಸೂಚನೆ ನೀಡಿದರು.

ಸಭೆಯಲ್ಲಿ ತಹಶೀಲ್ದಾರ್ ಎಂ.ಎಲ್.ನಂದೀಶ್, ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜ್, ಆರೋಗ್ಯ ಇಲಾಖೆಯ ಡಾ.ಶಿವಕುಮಾರ್ ಸೇರಿದಂತೆ ಇತರರಿದ್ದರು.

# ರಾಣೇಬೆನ್ನೂರಿನಿಂದ ಮಂಗಳೂರು, ಗೋವಾಕ್ಕೆ ಸರ್ಕಾರಿ ಬಸ್ ಆರಂಭ



ರಾಣೇಬೆನ್ನೂರು, ಜ.5- ರಾಣೇಬೆನ್ನೂರಿನಿಂದ ಮಂಗಳೂರು ಮತ್ತು ಗೋವಾದ ಮಾಪ್ಸಾಕ್ಕೆ ಇಂದಿನಿಂದ ವಾಯವ್ಯ ಸಾರಿಗೆ ಬಸ್ ಪ್ರಾರಂಭಿಸಲಾಗಿದ್ದು, ಸಂಸ್ಥೆಯ ಉಪಾಧ್ಯಕ್ಷ ಡಾ. ಬಸವರಾಜ ಕೇಲಗಾರ ಚಾಲನೆ ನೀಡಿದರು.

ನಗರದಿಂದ ಪ್ರತಿದಿನ ರಾತ್ರಿ 8.30 ಕ್ಕೆ ಹೊರಡುವ ಎರಡು ಬಸ್‌ಗಳು ಬೆಳಿಗ್ಗೆ 6 ಗಂಟೆಗೆ ಮಾಪ್ಸಾ ಮತ್ತು ಮಂಗಳೂರು ತಲುಪಲಿವೆ. ಅಲ್ಲಿಂದ ರಾತ್ರಿ 9 ಗಂಟೆಗೆ ಹೊರಟು ಬೆಳಿಗ್ಗೆ ರಾಣೇಬೆನ್ನೂರಿಗೆ ಬರಲಿವೆ. ಈ ಎರಡೂ ಬಸ್‌ಗಳ ಪ್ರಯಾಣದ ಸಮಯ ಮತ್ತು ದೂರ ಸ್ವಲ್ಪ ಹೆಚ್ಚೆನಿಸಿದರೂ ಸಹ ಟಿಕೆಟ್ ದರ ಕಡಿಮೆ ಇದೆ. ರಾಣೇಬೆನ್ನೂರು ಜೊತೆಗೆ ಬ್ಯಾಡಗಿ, ಹಿರೇಕೆರೂರು, ಶಿರಾಳಕೊಪ್ಪ ಮುಂತಾದ ತಾಲ್ಲೂಕಿನ ಪ್ರಯಾಣಿಕರಿಗೂ ಸೇವೆ ಒದಗಿಸಲು ಮಾರ್ಗ ರೂಪಿಸಲಾಗಿದೆ ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದರು.

ಅರಣ್ಯ ಅಭಿವೃದ್ಧಿ ಪ್ರಾಧಿಕಾರದ ನಿರ್ದೇಶಕರಾದ ಭಾರತಿ ಜಂಬಗಿ, ನಗರಸಭೆ ಸದಸ್ಯರಾದ ಪಾಂಡುರಂಗ ಗಂಗಾವತಿ, ಎಂ.ಬಿ.ಅಂಗಡಿ, ಗಂಗಾ ಬ್ಯಾಂಕ್ ಅಧ್ಯಕ್ಷ ರತ್ನಾಕರ ಕುಂದಾಪುರ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಚೀನಾದ 10 ಪ್ರಾಂತ್ಯಗಳಲ್ಲಿ ಜನನ ದರ ಶೇ.1ಕ್ಕೂ ಕಡಿಮೆ

ಬೀಜಿಂಗ್, ಜ. 5 - ಚೀನಾದ ಹತ್ತು ಪ್ರಾಂತ್ಯಗಳಲ್ಲಿ ಜನನ ದರ ಶೇ.1ಕ್ಕಿಂತ ಕಡಿಮೆಯಾಗಿದೆ. ಇದು ಚೀನಾದಲ್ಲಿ ಜನಸಂಖ್ಯಾ ಸಮಸ್ಯೆ ಇನ್ನಷ್ಟು ಉಲ್ಬಣಿಸುವ ಅಪಾಯ ತಂದಿದೆ.

**ಜನಸಂಖ್ಯಾ ಸಮಸ್ಯೆ ಇನ್ನಷ್ಟು ಉಲ್ಬಣ**

ಕಳೆದ ವರ್ಷ ಆಗಸ್ಟ್‌ನಲ್ಲಿ ಚೀನಾ ಮೂರು ಮಕ್ಕಳ ನೀತಿಯನ್ನು ಜಾರಿಗೆ ತಂದಿತ್ತು. ಮಕ್ಕಳ ಜನನ ಸಂಖ್ಯೆ ಹೆಚ್ಚಿಸಲು ಈ ಕ್ರಮ ತೆಗೆದುಕೊಳ್ಳಲಾಗಿತ್ತಾದರೂ, ಪರಿಸ್ಥಿತಿ ಸುಧಾರಿಸಿಲ್ಲ. ಈ ಹಿಂದೆ ಚೀನಾ ಒಂದು ಮಗುವಿನ ನೀತಿ ಹೊಂದಿತ್ತು. ನಂತರ 2016ರಲ್ಲಿ ಎರಡು ಮಕ್ಕಳಿಗೆ ಅನುಮತಿ ನೀಡಿತ್ತು. ಈಗ ಮೂರು ಮಕ್ಕಳಿಗೆ ಅನುಮತಿ ನೀಡಿದೆ. ಇತ್ತೀಚಿನ ಜನಗಣತಿ ಪ್ರಕಾರ, ಚೀನಾದ ಜನಸಂಖ್ಯೆ ಬೆಳವಣಿಗೆ ಅತ್ಯಂತ ಮಂದವಾಗಿದೆ.

2020ರಲ್ಲಿ ಚೀನಾದಲ್ಲಿ 60 ವರ್ಷಕ್ಕಿಂತ ಹೆಚ್ಚಿನ ವಯೋಮಾನದವರ ಸಂಖ್ಯೆ 264 ದಶಲಕ್ಷಕ್ಕೆ ತಲುಪಿದೆ.

ಚೀನಾದ 20ಕ್ಕೂ ಹೆಚ್ಚು ಪ್ರಾಂತ್ಯಗಳು ಮೂರು ಮಗುವಿನ ನೀತಿಗೆ ಉತ್ತೇಜನ ನೀಡಿದ್ದವು. ಮಕ್ಕಳಿಗಾಗಿ ದಂಪತಿ ಹೆಚ್ಚು ರಜೆ ಪಡೆಯಲು ಅನುಮತಿ ನೀಡಿದ್ದವು. ಆದರೂ, 2020ರಲ್ಲಿ ಚೀನಾದ ಮಕ್ಕಳ ಜನನ ದರ ತೀವ್ರವಾಗಿ ಕುಸಿದಿದೆ. ಹೆನಾನ್ ಪ್ರಾಂತ್ಯದಲ್ಲಿ 1978ರ ನಂತರ ಇದೇ ಮೊದಲ ಬಾರಿಗೆ ಮಕ್ಕಳು ಜನಿಸುವ ಪ್ರಮಾಣ ವರ್ಷಕ್ಕೆ ಹತ್ತು ಲಕ್ಷಕ್ಕಿಂತ ಕಡಿಮೆ ಆಗಿದೆ.

2020ರಲ್ಲಿ ಚೀನಾದಲ್ಲಿ ಪ್ರತಿ ಸಾವಿರ ಜನರಿಗೆ 8.52 ಮಕ್ಕಳು ಜನಿಸಿವೆ. ಇದು 43 ವರ್ಷಗಳಲ್ಲೇ ಅತಿ ಕಡಿಮೆಯಾಗಿದೆ ಎಂದು ಸರ್ಕಾರಿ ಸ್ವಾಮ್ಯದ ಗ್ಲೋಬಲ್ ಟೈಮ್ಸ್ ವರದಿ ಮಾಡಿದೆ.

# ನಗರದಲ್ಲಿ 15 ರಿಂದ ಉತ್ಸವಾಂಭ ದೇವಿಯ ಜಾತ್ರಾ ಮಹೋತ್ಸವ



ದಾವಣಗೆರೆ, ಜ.5- ನಗರದ ವಸಂತ ರಸ್ತೆಯ ಹಾಲೇಶ್ವರ ಪ್ರಿಂಟಿಂಗ್ ಪ್ರೆಸ್ ಹಿಂಭಾಗದಲ್ಲಿರುವ ಶ್ರೀ ಉತ್ಸವಾಂಭ ದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ, ಶ್ರೀ ಮಹಾಲಕ್ಷ್ಮಿ ದೇವರುಗಳ ಜಾತ್ರಾ ಮಹೋತ್ಸವ ಕಾರ್ಯಕ್ರಮಗಳು ಇದೇ ದಿನಾಂಕ 15 ರಿಂದ 3 ದಿನಗಳ ಕಾಲ ಜರುಗುವುದು.

ದಿನಾಂಕ 17 ರ ಬೆಳಗಿನ ಜಾವ 4.30 ಕ್ಕೆ ತಾಯಿಯವರಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಪುಷ್ಪ ಅಲಂಕಾರ ಪೂಜೆ ಹಾಗೂ 9.30 ರಿಂದ ಸರ್ವ ಭಕ್ತಾದಿಗಳಿಗೆ ಉಡಿ ಅಕ್ಕಿ ಸೇವೆ ಮತ್ತು ಅಂದು ಮಧ್ಯಾಹ್ನ 12.30 ಕ್ಕೆ ಪ್ರಸಾದ ವಿನಿಯೋಗ ನಡೆಯುವುದು. ಅಂದು ಸಂಜೆ 5.30ಕ್ಕೆ ದೇವಿಯ ಮೆರವಣಿಗೆ ನಡೆಯುವುದು.

ಮೆರವಣಿಗೆ ವೇಳೆಯಲ್ಲಿ ಎಲ್ಲಾ ಕನ್ಯೆಯರು, ಮುತ್ತೈದೆಯರು ಕಳಸದೊಂದಿಗೆ ದೇವಿಯನ್ನು ಸ್ವಾಗತಿಸಬೇಕಾಗಿ ಶ್ರೀ ಉತ್ಸವಾಂಭ ದೇವಿ ಭಕ್ತ ಮಂಡಳಿ ತಿಳಿಸಿದೆ.

# ಜಿಲ್ಲಾ ಆರೋಗ್ಯ ರಕ್ಷಾ ಸಮಿತಿಗೆ ನೇಮಕ

ದಾವಣಗೆರೆ, ಜ. 5- ದಾವಣಗೆರೆ ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿಗೆ ನಾಲ್ವರನ್ನು ಅಧಿಕಾರೇತರ ಸದಸ್ಯರನ್ನಾಗಿ ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಜಾಲಿನಗರದ ಕಿಶೋರ್ ಕುಮಾರ್, ಆರ್.ಎಂ.ಸಿ.ಲಿಂಕ್ ರಸ್ತೆಯ ಶೇಖರ್, ಕೆ.ಬಿ. ಬಡಾವಣೆಯ ಬಿ. ಮಂಜುನಾಥ್ ಮತ್ತು ದೇವರಾಜ ಅರಸು ಬಡಾವಣೆ ಸಿ ಬ್ಲಾಕ್‌ನ ಗಣೇಶ್ ಕರೂರು ಅವರುಗಳು ಸಿ.ಜಿ. ಆಸ್ಪತ್ರೆ ಆರೋಗ್ಯ ರಕ್ಷಾ ಸಮಿತಿ ಸದಸ್ಯರಾಗಿ ನೇಮಕಗೊಂಡಿದ್ದಾರೆ.

# ಸಮಯ ಬಳಸಿಕೊಂಡು ಸಾಧನೆ ಮಾಡಬೇಕು



ಚಿತ್ರದುರ್ಗ, ಜ.5 - ಮುಪ್ಪು ಮರಣದ ಮಹಾದ್ವಾರ. ಅದು ಅನಿವಾರ್ಯ ಹಾಗೂ ನಿಸರ್ಗದ ನಿಯಮವೂ ಕೂಡ. ಹಾಗಾಗಿ ಸಮಯವನ್ನು ಬಳಸಿಕೊಂಡು ಸಾಧನೆ ಮಾಡುತ್ತಾ ಸಾಗಬೇಕೆಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಶ್ರೀ ಜಗದ್ಗುರು ಮುರುಘರಾಜೇಂದ್ರ ಮಠದಲ್ಲಿ ಮೊನ್ನೆ ಏರ್ಪಾಡಾಗಿದ್ದ ಜಮುರಾ ರಾಷ್ಟ್ರೀಯ ನಾಟಕೋತ್ಸವದ 2ನೇ ದಿನದ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಶರಣರು ಆಶೀರ್ವಚನ ನೀಡಿದರು. ಜನ ವ್ಯತ್ಯಾಸ ಮಾಡಬಹುದು. ಆದರೆ, ಮರಣ ವ್ಯತ್ಯಾಸ ಮಾಡುವುದಿಲ್ಲ. ನಶ್ವರವಾದ ಈ ಶರೀರವನ್ನು ನಾವೆಲ್ಲ ಪಡೆದುಕೊಂಡಿದ್ದೇವೆ. ಮಾನವ ಬದುಕಿನಲ್ಲಿ ಸಾಧನೆ ಶಾಶ್ವತವಾದುದು. ವಿಚಾರಗಳಲ್ಲಿ ಅಪ್ರತಿಮವಾದ ಶಕ್ತಿ ಇದೆ. ವಿಚಾರಗಳು ಜಗತ್ತನ್ನು ಆಳುತ್ತವೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅಧ್ಯಕ್ಷ ಎಂ. ಚಂದ್ರಪ್ಪ ಮಾತನಾಡಿ, ನಾಟಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕೆಲಸ ಮಾಡುತ್ತದೆ ಎಂದು ಅಭಿಪ್ರಾಯಪಟ್ಟರು.


ಇದೇ ಸಂದರ್ಭದಲ್ಲಿ ಶ್ರೀಮಠದ ಗೌರವ ಸ್ವೀಕರಿಸಿ ಮಾತನಾಡಿದ ರಂಗ ಸಂಘಟಕ ಗುಂಡಣ್ಣ ಚಿಕ್ಕಮಗಳೂರು, ರಂಗಭೂಮಿ ಜಾತಿ, ಮತಗಳ ಗೋಡೆಗಳನ್ನು ಕೆಡವಿ ಸಮಾಜವನ್ನು ಒಂದುಗೂಡಿಸುತ್ತದೆ ಎಂದು ಹೇಳಿದರು.

ರಾಜ್ಯ ಖನಿಜ ನಿಗಮದ ಅಧ್ಯಕ್ಷ ಎಸ್. ಲಿಂಗಮೂರ್ತಿ, ಮಾಜಿ ಶಾಸಕ ಹೆಚ್.ಪಿ. ರಾಜೇಶ್ ಮಾತನಾಡಿದರು. ಪಟೇಲ್ ಶಿವಕುಮಾರ್ ವೇದಿಕೆಯಲ್ಲಿದ್ದರು.

ಮಹಂತೇಶ್ ರಾಮದುರ್ಗ ರಚನೆ ಹಾಗು ನಿರ್ದೇಶನದ 'ಸೋರುತಿಹುದು ಸಂಬಂಧ' ನಾಟಕವನ್ನು ಜಮುರಾ ಸುತ್ತಾಟ ತಂಡದವರು ಮನೋಜ್ಞವಾಗಿ ಅಭಿನಯಿಸಿದರು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಕೆ.ಎಂ. ವೀರೇಶ್ ಸ್ವಾಗತಿಸಿದರು. ಜಂಬುನಾಥ್ ನಿರೂಪಿಸಿದರು.

# ವೀರ ಯೋಧ ಪಕ್ಕೀರಪ್ಪನಿಗೆ ನಾಗರಿಕ ಸನ್ಮಾನ




ರಾಣೇಬೆನ್ನೂರು, ಜ. 5- ಸುದೀರ್ಘ 22 ವರ್ಷಗಳ ಕಾಲ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ಮರಳಿ ಮನೆಗೆ ಆಗಮಿಸಿದ ರಾಣೇಬೆನ್ನೂರು ತಾಲ್ಲೂಕು ಲಿಂಗದ ಹಳ್ಳಿ ಗ್ರಾಮದ ಪಕ್ಕೀರಪ್ಪ ದುರಗಪ್ಪ ಮಾಗನೂರ ಅವರು 1997-98 ರಲ್ಲಿ ನಡೆದ ಸೇನಾ ಭರ್ತಿಗೆ ಆಯ್ಕೆ ಯಾಗಿ ಜಮ್ಮ-ಕಾಶ್ಮೀರ, ಅಯೋಧ್ಯಾ, ಹಿಮಾಚಲ ಪ್ರದೇಶ, ಜಾರ್ಖಂಡ ನಲ್ಲಿ ಸೇವೆ ಸಲ್ಲಿಸಿ, ಸ್ವಯಂ ನಿವೃತ್ತಿ ಹೊಂದಿ ಜಾರ್ಖಂಡ್‌ನಿಂದ ಸ್ವ ಗ್ರಾಮಕ್ಕೆ ಆಗಮಿಸುವ ಮುನ್ನ ಮಂಗಳವಾರ ರಾಣೇಬೆನ್ನೂರಿನ ರೈಲ್ವೆ ನಿಲ್ದಾಣದಿಂದ ಅಭಿಮಾನಿಗಳು ಅದ್ಧೂರಿ ಸ್ವಾಗತ ಕೋರಿದರು.

ವಿವಿಧ ರೈತ ಪರ, ಕನ್ನಡ ಪರ ಸಂಘಟನೆಗಳು, ನ್ಯಾಯವಾದಿಗಳು, ಮಾಗೋಡ-ಇಟಗಿ-ಮುಷ್ಠೂರು-ಮಣಕೂರ ಗ್ರಾಮಗಳ ಶಾಲಾ ಮಕ್ಕಳು, ಮತ್ತು ಗ್ರಾಮದ ನಾಗರಿಕರು ಗೌರವ ವಂದನೆ ಸಲ್ಲಿಸಿದರು.

ನಗರದ ಬಸ್ ನಿಲ್ದಾಣದ ಹತ್ತಿರ ವೀರ ಯೋಧ ಪಕ್ಕೀರಪ್ಪನಿಗೆ ಹಸಿರು ಶಾಲು ಹೊದಿಸಿ, ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಮಾತನಾಡಿ, ದೇಶ ಸೇವೆ ಸಲ್ಲಿಸಿದ ಪಕ್ಕೀರಪ್ಪನವರು ಇನ್ನು ಮುಂದೆ ಕೃಷಿಕ ನಾಗಿ ಕೃಷಿ ವಲಯದಲ್ಲಿ ಸಾಧನೆಗೈದು ರೈತಾಪಿ ವರ್ಗದವರ ಏಳಿಗೆಗೆ ಶ್ರಮಿಸಿ ರೈತರ ಹೋರಾಟದಲ್ಲಿ ಭಾಗಿಯಾಗಲೆಂದರಲ್ಲದೇ ನಾಗರಿಕರ ಪ್ರೀತಿಯ ಸ್ವಾಗತಕ್ಕೆ ಮೆಚ್ಚಿ ಪ್ರತಿಯೊಂದು ಕುಟುಂಬದಲ್ಲೂ ಈ ಪಕ್ಕೀರಪ್ಪನಂತಹ ವೀರ ಯೋಧರು ಜನಿಸಿ ಈ ಭಾರತಾಂಭೆಯ ಸೇವೆ ಮಾಡಲೆಂದು ಹಾರೈಸಿದರು.

ಈ ಸಂದರ್ಭದಲ್ಲಿ ಮಂಜುನಾಥ ಗೌಡ ಶಿವಣ್ಣವರ, ಎಸ್.ಡಿ. ಹಿರೇಮಠ, ಬಸವರಾಜ ಕೊಂಗಿಯವರ, ಚಂದ್ರಣ್ಣ ಬೇಡರ, ಅಶೋಕ ನಾಯಕ, ನಾಗಣ್ಣ ಟಿ., ಕರಬಸಪ್ಪ ಓಲೇರ ಮುಂತಾದವರು ಭಾಗವಹಿಸಿದ್ದರು.


# ಅನುಮತಿ ಪಡೆಯದೇ ಫ್ಲೆಕ್ಸ್, ಬ್ಯಾನರ್ ಅಳವಡಿಸಿದರೆ ಕ್ರಮ

ದಾವಣಗೆರೆ, ಜ.5- ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನುಮತಿ ಇಲ್ಲದೆ ಫ್ಲೆಕ್ಸ್, ಬ್ಯಾನರ್, ಫಲಕ ಅಳವಡಿಸುವವರ ವಿರುದ್ಧ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು ಎಂದು ಪಾಲಿಕೆ ಆಯುಕ್ತರು ಎಚ್ಚರಿಕೆ ನೀಡಿದ್ದಾರೆ.

ಸಾರ್ವಜನಿಕರು, ಫ್ಲೆಕ್ಸ್/ಬ್ಯಾನರ್ ಮುದ್ರಣಕಾರರು ಸರ್ಕಾರಿ, ಖಾಸಗಿ, ಸಾರ್ವಜನಿಕ ಆಸ್ತಿಗಳು, ವಿದ್ಯುತ್ ಕಂಬಗಳು, ಮೀಡಿಯನ್ಸ್, ಡಿವೈಡರ್ಸ್, ಕಲ್ವರ್ಟ್, ರಸ್ತೆ ಬದಿ ಮರಗಳು, ಸರ್ಕಲ್ ಹಾಗೂ ಇನ್ನಿತರೆ ಸ್ಥಳಗಳಲ್ಲಿ ಅನಧಿಕೃತವಾಗಿ ಫ್ಲೆಕ್ಸ್, ಬ್ಯಾನರ್, ಬಾವುಟ, ಬಂಟಿಂಗ್ಸ್ ಅಳವಡಿಸುತ್ತಿದೆ. ಇದರಿಂದಾಗಿ ಸಾರ್ವಜನಿಕ ಪ್ರದೇಶ ಗಳನ್ನು ವಿರೂಪ ಗೊಳಿಸುತ್ತಿರುವುದು ಹೆಚ್ಚಾಗುತ್ತಿದೆ.

ಸಾರ್ವಜನಿಕ ಆಸ್ತಿಗಳನ್ನು ವಿರೂಪಗೊಳಿಸುವುದು, ಕರ್ನಾಟಕ ಮುಕ್ತ ಸ್ಥಳಗಳು (ವಿರೂಪಗೊಳಿಸುವಿಕೆ ತಡೆಗಟ್ಟುವಿಕೆ) ಕಾಯ್ದೆ-1981ರ ಕಲಂ (3) ರನ್ವಯ ಉಲ್ಲಂಘನೆ ಹಾಗೂ ಶಿಕ್ಷಾರ್ಹ ಅಪರಾಧ ವಾಗುತ್ತದೆ. ಕಾಯ್ದೆ ಪ್ರಕಾರ ಆರು ತಿಂಗಳು ಜೈಲು ಶಿಕ್ಷೆ ಅಥವಾ ರೂ.1000/- ದಂಡ ಅಥವಾ ಎರಡೂ ರೀತಿಯ ದಂಡನೆ ವಿಧಿಸಲು ಅವಕಾಶವಿರುತ್ತದೆ ಎಂದು ಪಾಲಿಕೆ ಆಯುಕ್ತರು ಎಚ್ಚರಿಸಿದ್ದಾರೆ.

# ಕುಸ್ತಿಯಲ್ಲಿ ಸತೀಶ್‌ಗೆ ದ್ವಿತೀಯ ಸ್ಥಾನ




ದಾವಣಗೆರೆ, ಜ.5- ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ್ ಕಾಲೇಜು ಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಸರಸ್ವತಿ ನಗರದ ಸರ್ಕಾರಿ ಮೆಟ್ರಿಕ್ ನಂತರದ ಎಸ್ಸಿ, ಎಸ್ಟಿ 'ಬಿ' ವಿದ್ಯಾರ್ಥಿ ನಿಲಯದ ನಿಲಯಾರ್ಥಿ ಹಾಗೂ ಎಂ.ಎಸ್.ಬಿ ಕಾಲೇಜಿನ ವಿದ್ಯಾರ್ಥಿ ಡಿ.ಎನ್.ಸತೀಶ್ ದ್ವಿತೀಯ ಸ್ಥಾನ ಪಡೆದಿದ್ದಾರೆ.

# ರಾಜ್ಯದಲ್ಲಿ ಕೊರೊನಾ ತೀವ್ರ ಏರಿಕೆ

## 4,246 ಸೋಂಕಿತರ ಪತ್ತೆ, ಇಬ್ಬರ ಸಾವು

ಬೆಂಗಳೂರು, ಜ. 5 – ರಾಜ್ಯದಲ್ಲಿ ಕೊರೊನಾ ಪ್ರಕರಣಗಳ ಹರಡುವಿಕೆ ತೀವ್ರವಾಗಿದ್ದು, ಒಂದೇ ದಿನದಲ್ಲಿ ಪ್ರಕರಣಗಳು ಕಂಡು ಬರುವುದು ಎರಡು ಪಟ್ಟು ಹೆಚ್ಚಾಗಿದೆ. ಬುಧವಾರ ರಾಜ್ಯದಲ್ಲಿ 4,246 ಸೋಂಕಿತರು ಪತ್ತೆಯಾಗಿದ್ದು, ಇಬ್ಬರು ಸಾವನ್ನಪ್ಪಿದ್ದಾರೆ. ಮಂಗಳವಾರ ರಾಜ್ಯದಲ್ಲಿ 2,479 ಸೋಂಕಿತರು ಪತ್ತೆಯಾಗಿದ್ದರು. ಬೆಂಗಳೂರು ನಗರ ಒಂದರಲ್ಲೇ 3,605 ಸೋಂಕಿತರು ಪತ್ತೆಯಾಗಿದ್ದಾರೆ. ರಾಜ್ಯದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ 17,414ಕ್ಕೆ ತಲುಪಿದೆ. ವಾರದ ಹಿಂದಷ್ಟೇ ಪ್ರತಿನಿತ್ಯ ಕಂಡು ಬರುವ ಪ್ರಕರಣಗಳ ಸಂಖ್ಯೆ 566 ರಷ್ಟಿತ್ತು. ಕೊರೊನಾ ಟೆಸ್ಟ್‌ಗಳಲ್ಲಿ ಪಾಸಿಟಿವ್ ಕಂಡು ಬರುವ ಪ್ರಮಾಣ ಶೇ.3.33ರಷ್ಟಕ್ಕೆ ತಲುಪಿದೆ. ದಕ್ಷಿಣ ಕನ್ನಡದಲ್ಲಿ 111, ಉಡುಪಿಯಲ್ಲಿ 88, ಮೈಸೂರಿನಲ್ಲಿ 59 ಸೋಂಕಿತರು ಕಂಡು ಬಂದಿದ್ದಾರೆ.

# ವಿಶ್ವೇಶತೀರ್ಥ ಶ್ರೀಪಾದರ ದ್ವಿತೀಯ ಆರಾಧನಾ ಮಹೋತ್ಸವ



ದಾವಣಗೆರೆ, ಜ. 5- ನಗರದ ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪದ್ಮ ವಿಭೂಷಣ ಶ್ರೀ 1008 ಶ್ರೀ ವಿಶ್ವೇಶತೀರ್ಥ ಶ್ರೀಪಾದರ ದ್ವಿತೀಯ ಆರಾಧನಾ ಮಹೋತ್ಸವವು ಇಂದು ನಡೆಯಿತು.

ವಿದ್ವಾನ್ ಪಂ. ಡಾ|| ವೆಂಕಟಗಿರೀಶಾಚಾರ್, ಜಯತೀರ್ಥಚಾರ್ ವಡೇರ್, ಪ್ರಕಾಶ್ ಪಾಟೀಲ್, ಕಂಪ್ಲಿ ಗುರುರಾಜಾಚಾರ್, ಶ್ಯಾಮ ಘಟಿಕಾರ್, ರಮೇಶ್ ನಾಡಿಗೇರ್, ಸುಬ್ಬಣ್ಣ ಆಚಾರ್ ಒಡೆಯರ್, ಕೆ.ಎಸ್. ಎಫ್.ಸಿ. ನಾಗರಾಜ್, ರಾಜಣ್ಣ, ಅಡುಗೆ ರಂಗಣ್ಣ ಮತ್ತು ಇತರರು ಉಪಸ್ಥಿತರಿದ್ದರು.

# ಮೂಲ ಡೋಸ್‌ನಂತೆಯೇ ಮುನ್ನೆಚ್ಚರಿಕೆ ಡೋಸ್

ನವದೆಹಲಿ, ಜ. 5 - ಮೊದಲ ಎರಡು ಡೋಸ್ ಪಡೆದುಕೊಂಡಿರುವ ಲಸಿಕೆಯನ್ನೇ ಮೂರನೆಯ ಮುನ್ನೆಚ್ಚರಿಕೆ ಡೋಸ್ ಆಗಿ ನೀಡಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಬರುವ ಜನವರಿ 10ರಿಂದ ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಹಾಗೂ 60 ವರ್ಷ ಮೀರಿದ ಸಹ ಅಸ್ವಸ್ಥತೆ ಉಳ್ಳವರಿಗೆ ಮುನ್ನೆಚ್ಚರಿಕೆ ಡೋಸ್ ನೀಡಲಾಗುವುದು.

ಜನವರಿ 10ರಿಂದ ಲಸಿಕೆಯ ಫಲಾನುಭವಿಗಳನ್ನು ಗುರುತಿಸಲು ಎಲ್ಲ ವ್ಯವಸ್ಥೆ ಮಾಡಿಕೊಳ್ಳಲಾಗುವುದು ಎಂದು ನೀತಿ ಆಯೋಗದ ಸದಸ್ಯ (ಆರೋಗ್ಯ) ಡಾ. ವಿ.ಕೆ. ಪೌಲ್ ಹೇಳಿದ್ದಾರೆ. ಮೊದಲ ಎರಡು ಡೋಸ್ ಯಾವುದನ್ನು ಪಡೆದಿರುತ್ತಾರೋ, ಮುನ್ನೆಚ್ಚರಿಕೆ ಡೋಸ್‌ಗೂ ಅದನ್ನೇ ನೀಡಲಾಗುವುದು. ಮೊದಲ ಎರಡು ಕೊವಿಶೀಲ್ಡ್ ಪಡೆದವರಿಗೆ ಮತ್ತೆ ಕೊವಿಶೀಲ್ಡ್ ನೀಡಲಾಗುವುದು. ಕೊವ್ಯಾಕ್ಸಿನ್ ಪಡೆದವರಿಗೆ ಕೊವ್ಯಾಕ್ಸಿನ್ ನೀಡಲಾಗುವುದು ಎಂದವರು ಹೇಳಿದ್ದಾರೆ.

# ಬ್ಯಾರಿಕೇಡ್ ತೆರವುಗೊಳಿಸುವಂತೆ ವ್ಯಾಪಾರಸ್ಥರ ಒತ್ತಾಯ



ದಾವಣಗೆರೆ, ಜ.5- ನಗರದ ರೇಣುಕಾ ಮಂದಿರದ ಬಳಿ ಸಂಚಾರ ಪೊಲೀಸ್ ಇಲಾಖೆಯಿಂದ ಇಡಲಾಗಿರುವ ಬ್ಯಾರಿಕೇಡ್‌ಗಳನ್ನು ತೆರವು ಮಾಡಿ, ಸುಗಮ ಸಂಚಾರಕ್ಕೆ ಅಗತ್ಯ ಕ್ರಮ ವಹಿಸಲು ಅಕ್ಕಮಹಾದೇವಿ ರಸ್ತೆ ಹಾಗೂ ಪಿ.ಬಿ. ರಸ್ತೆ ವ್ಯಾಪಾರಿಗಳು ನಗರ ಪೊಲೀಸ್ ಉಪಾಧೀಕ್ಷಕ ನರಸಿಂಹ ತಾಮ್ರಧ್ವಜ ಅವರನ್ನು ಭೇಟಿ ಮಾಡಿದರು.

ಬ್ಯಾರಿಕೇಡ್ ಅಳವಡಿಕೆಯಿಂದ ವ್ಯಾಪಾರ ಕುಸಿದಿದೆ. ಬಸ್, ಲಾರಿಗಳ ವೇಗಕ್ಕೆ ಕಡಿವಾಣ ಹಾಕಬೇಕು. ಅಕ್ಕಮಹಾದೇವಿ ರಸ್ತೆಗೆ ಬಸ್‌ಗಳು ತಿರುವು ಪಡೆಯುವುದು ಬೇಡ. ಆದರೆ ಕಾರ್, ಆಟೋ, ದ್ವಿಚಕ್ರ ವಾಹನಗಳ ಸಂಚಾರಕ್ಕೆ ಅವಕಾಶ ನೀಡಿ, ಸಂಚಾರ ನಿಯಮ ಉಲ್ಲಂಘನೆ ಮಾಡುವವರ ಮೇಲೆ ದಂಡ ವಿಧಿಸಿ ಎಂದು ಮನವಿ ಮಾಡಿದರು.

ಈ ಬಗ್ಗೆ ಮಾತನಾಡಿದ ನರಸಿಂಹ ಅವರು ನಗರದಲ್ಲಿ ಕಳೆದ ತಿಂಗಳು ರಸ್ತೆ ಅಪಘಾತದಲ್ಲಿ ಮೂರು ಜನರು ಸಾವಿಗೀಡಾಗಿದ್ದಾರೆ. ಜನರು ರಸ್ತೆ ನಿಯಮ ಪಾಲನೆ ಮಾಡುತ್ತಿಲ್ಲ. ಒಮ್ಮುಖ ರಸ್ತೆಯಲ್ಲಿ ಬರುವುದು ಹೆಚ್ಚಾಗಿದೆ. ಮೊಬೈಲ್ ಫೋನ್ ಬಳಕೆಯೂ ಸಹ ಹೆಚ್ಚಾಗಿದೆ. ಅಪಘಾತಗಳನ್ನು ತಡೆಗಟ್ಟಲು ಇಲಾಖೆ ವತಿಯಿಂದ ಸೂಕ್ತ ಕ್ರಮ ವಹಿಸಲಾಗುತ್ತದೆ ಎಂದು ತಿಳಿಸಿದರು.

ಬ್ಯಾರಿಕೇಡ್ ತೆರವಿಗೆ ಸಂಬಂಧಪಟ್ಟಂತೆ ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಸಾಮಾಜಿಕ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್, ಎಸ್. ಮಂಜುನಾಥ್, ಇಂದೂಧರ್ ನಿಶಾನಿಮಠ್, ಶಶಿ ಜೆ.ಎಸ್, ವಸಂತ, ಖಲಂದರ್ ಕೆ, ಜೆ.ಎಂ. ಶಾಂತಕುಮಾರ್, ಚಂದ್ರಹಾಸ್, ನಯಾಜ್ ಬೇಗ್, ಲಿಯಾಖತ್ ಆಲಿ, ಆನಂದ್ ಹೋಟೆಲ್, ಜಬಿ, ವಿಶ್ವನಾಥ್ ಈ ಸಂದರ್ಭದಲ್ಲಿ ಇದ್ದರು.

# ಹಾಡಹಗಲೇ ಶಿಕ್ಷಕಿಯ ಸರ ಅಪಹರಣ

ದಾವಣಗೆರೆ, ಜ.5- ಪಾದಚಾರಿ ಸರ್ಕಾರಿ ಶಾಲೆಯ ಶಿಕ್ಷಕಿಯೋರ್ವರ ಕೊರಳಲ್ಲಿದ್ದ ಬಂಗಾರದ ಸರವನ್ನು ಹಾಡಹಗಲೇ ಅಪಹರಿಸಿರುವ ಘಟನೆ ಸ್ಥಳೀಯ ವಿದ್ಯಾನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಂದು ನಡೆದಿದೆ.

ವಿನಾಯಕ ಬಡಾವಣೆ ಮೊದಲನೇ ಕ್ರಾಸ್ ವಾಸಿ ಸರಸ್ವತಿ ಸರ ಅಪಹರಣಕ್ಕೊಳಗಾದ ಶಿಕ್ಷಕಿ. ತಮ್ಮ ಕರ್ತವ್ಯ ಮುಗಿಸಿ ಬಸ್ ನಲ್ಲಿ ಬಂದು ವಿದ್ಯಾನಗರ ಬಸ್ ನಿಲ್ದಾಣದಲ್ಲಿ ಇಳಿದು ಮನೆಯತ್ತ ನಡೆದುಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ಈ ಘಟನೆ ನಡೆದಿದೆ.

ಆ ಪ್ರದೇಶದಲ್ಲಿ ಜನರ ಓಡಾಟ ವಿರಳವಾಗಿದ್ದನ್ನು ಗಮನಿಸಿದ ಸರಗಳ್ಳನೋರ್ವ ಹಿಂದಿನಿಂದ ಬಂದು ಶಿಕ್ಷಕಿಯ ಕೊರಳಲ್ಲಿದ್ದ 6 ತೊಲದ ಬಂಗಾರದ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದಾನೆ ಎಂದು ಆರೋಪಿಸಲಾಗಿದೆ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte